# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE    Vol XIV 2    ಫೆಬ್ರವರಿ 1996

ಈ ಸಂಚಿಕೆಯಲ್ಲಿ


| | |
|---|---|
| 'ದೇವನೆಲ್ಲಿಹನೋ' ಒಂದು ಅನಿಸಿಕೆ - ಭವಾನಿ | 2 |
| ಸುತ್ತ ಮುತ್ತ | 4 |
| Science - Ozone - a boon or bane | 5 |
| ಸಾಹಿತ್ಯ -'ಜ್ಞಾನಪೀಠ ಪ್ರಶಸ್ತಿ' ಹಾಗೆಂದರೇನು - ಪ್ರೊ\| ರಘುನಾಥ | 6 |
| ಸಂದರ್ಶನ - ಶ್ರೇಷ್ಠ ಅಧ್ಯಾಪಕಿ ಜಮುನಾ ಉಚ್ಚಿಲ್ - ರೀಟಾ | 8 |
| ವಿಚಾರಧಾರೆ - ಪ್ರೀತಿ - ನದಿಯಂತೆ; ಅನು: ಅರುಣ ಬೋಪಟ | 9 |
| ದಾಸರೆಂದರೆ ಪುರಂದರ ದಾಸರಯ್ಯ - ರೀಟಾ | 10 |
| ವಶೀಕರಣ ಮತ್ತು ರೋಗ ಚಿಕಿತ್ಸೆ - ಡಾ\| ಉಷಾ ಸುಬ್ಬರಾವ್ | 12 |
| ಪುಸ್ತಕ ಪರಿಚಯ - ಜಿ. ಪಿ. ಕುಸುಮಾರವರ 'ಪರುಷ' - ಶ್ರೀನಿವಾಸ ಜೋಕಟ್ಟೆ | 15 |
| ಕವನಗಳು | 16 |


**The Mysore Association, Bombay**

393, Bhaudaji Road, Matunga, Bombay 400 019.

[redacted] Tel.: 402 46 47 Grams: "KARUNADU"

# 'ದೇವನೆಲ್ಲಿ ಹನೋ' ಒಂದು ಅನಿಸಿಕೆ



'ದೇವನೆಲ್ಲಿ ಹನೋ' ನಾಟಕದ ದೃಶ್ಯಗಳು



ಕನ್ನಡ ಕಲಾಕೇಂದ್ರದ 38ನೇ ವಾರ್ಷಿಕೋತ್ಸವದ ಅಂಗವಾಗಿ ಡಿಸೆಂಬರ್ 1995ರ ಕೊನೆಯಲ್ಲಿ ರವೀಂದ್ರ ನಾಟ್ಯ ಮಂದಿರದಲ್ಲಿ ಮೈಸೂರು ಅಸೋಸಿಯೇಶನ್‌ನ ಕಲಾತಂಡದವರು ಸಾದರ ಪಡಿಸಿದ ನಾಟಕ "ದೇವನೆಲ್ಲಿ ಹನೋ" ಅನ್ನು ಬರೆದು ಆಡಿಸಿದವರು ಶ್ರೀಮತಿ ಗೀತಾ ವಿಶ್ವನಾಥ್.

ಇದು ಒಂದು ರೀತಿಯಲ್ಲಿ ದುರಂತ ನಾಟಕ. ಇಂದಿನ ಸಮಾಜಕ್ಕೆ ಕನ್ನಡಿ ಹಿಡಿದಂತಿರುವ ಈ ನಾಟಕದ ಕಥಾವಸ್ತು, ಮನುಷ್ಯ ಜಾತಿ ಮತ್ತು ಮತದ ಹೆಸರಿನಲ್ಲಿ ತನ್ನ ಸ್ವಾರ್ಥಕ್ಕಾಗಿ ತನ್ನನ್ನೂ ಹಾಗೂ ಪರಿಸರವನ್ನು ವಿನಾಶದ ಅಂಚಿಗೆ ಎಳೆದೊಯ್ಯುತ್ತಿರುವುದನ್ನು ಎತ್ತಿ ತೋರಿಸುತ್ತದೆ. ಊರಿಗೇ ಸಂಕಟ ಬಂದಾಗ ಒಂದಾಗಿ ಆ ಸಮಸ್ಯೆಯನ್ನು ಪರಿಸಹರಿಸಲು ಶ್ರಮಿಸುವ ಒಂದು ಇಡೀ ಗ್ರಾಮದ ಜನತೆ, ಯಾವುದೋ ಒಂದಿಬ್ಬರು ಕಿತಾಪತಿಯ ಜನಗಳ ದೆಸೆಯಿಂದ ಇಲ್ಲದ ವಿವಾದವನ್ನು ಎಬ್ಬಿಸಿಕೊಂಡು ದೇವರ ಹೆಸರಿನಲ್ಲಿ ನೂರೆಂಟು ಗುಂಪಾಗಿ ತಮ್ಮತಮ್ಮಲ್ಲೇ ಹೊಡೆದಾಡಿಕೊಂಡು ಕೊನೆಗೆ ಎಲ್ಲರೂ ಪ್ರಕೃತಿಯ ವಿಕೋಪಕ್ಕೆ ಬಲಿಯಾಗಿ ನಾಶ ಹೊಂದುತ್ತಾರೆ. ಇದಕ್ಕೆ ಮುಖ್ಯ ಕಾರಣವಾದ ದೇವ ಮೂರ್ತಿಯೊಂದೇ ಕೊನೆಯಲ್ಲಿ ಮೂಕ ಸಾಕ್ಷಿಯಾಗಿ ಉಳಿದುಕೊಳ್ಳುತ್ತದೆ.

ನಾಟಕದ ಪ್ರದರ್ಶನ ಪರಿಣಾಮಕಾರಿಯಾಗಿತ್ತು. ನಾಟಕದಲ್ಲಿ ಹಾಸ್ಯ, ನವಿರು, ವ್ಯಂಗ್ಯ, ನಯ, ಸ್ನೇಹ, ಕೀಟಲೆ, ಗಂಭೀರ ಭಯ, ಶೌರ್ಯ, ಉಢಾಫೆ, ಉದಾಸೀನ, ನಿರ್ಲಿಪ್ತತೆ, ಬಂಡಾಯ, ಪ್ರೀತಿ, ಹುಮ್ಮಸ್ಸು, ಧೈರ್ಯ ಎಲ್ಲವೂ ಸೇರಿದ್ದು ನೋಡುಗರ ಗಮನ ಹಾಗು ಆಸಕ್ತಿಯನ್ನು ಹಿಡಿದಿಡುವಲ್ಲಿ ಸಮರ್ಥವಾಗಿತ್ತು. ಹಾಡು ಸಂಗೀತ ಮತ್ತು ಕುಣಿತದಿಂದಾಗಿ ನಾಟಕಕ್ಕೆ ಕಳೆ ಕಟ್ಟಿತ್ತು. ತಾಂತ್ರಿಕತೆ ಹಾಗೂ ಬೆಳಕಿನ ವಿನ್ಯಾಸ ನಿರ್ವಹಣೆ ಸಮರ್ಪಕವಾಗಿತ್ತು. ಒಂದೆರಡು ಸನ್ನಿವೇಶಗಳು ನೋಡುವವರಲ್ಲಿ ವಿಶೇಷ ಆಸಕ್ತಿಯನ್ನು ಕೆರಳಿಸಿದ್ದವು. ಅದರಲ್ಲಿ ತರುಣ ಪಾತ್ರಧಾರಿಯೊಬ್ಬ ಇಂದಿನ ದಿನಗಳಲ್ಲಿ ನಡೆಯುತ್ತಿರುವ ಕುರುಡು ಪಾಠ ಹಾಗೂ ಮೂಢ ಮತಾನುಕರಣೆಯ ಬಗ್ಗೆ ಎತ್ತಿದ ಪ್ರಶ್ನೆ ಪ್ರತಿಯೊಬ್ಬರನ್ನು ವಿಚಾರಕ್ಕೀಡುಮಾಡುವಂತಿತ್ತು. ಅಂತ್ಯ ಮಾತ್ರ ಬಹಳ ಅಸಾಧಾರಣವಾಗಿದ್ದು ಸಮಸ್ಯೆಗೆ ಸುಲಭೋಪಾಯವನ್ನು ಹುಡುಕಿದಂತಿತ್ತು. ಗುಂಡನ ಪಾತ್ರ ನಿರ್ವಹಣೆಯಲ್ಲಿ ಬಾಲನಟ ಅಭಿಜಿತ್ ಬಹಳಷ್ಟು ರಂಜಿಸಿದ. ನಾಟಕದ ನಿರೂಪಣೆಯಲ್ಲಿ ಸ್ವಲ್ಪ ಬಿಗಿ ಬೇಕಿತ್ತು.

ಆ ದಿನ ನಮ್ಮೆಲ್ಲರನ್ನೂ ಬಾಧಿಸಿದ ಕೊರಗು ಶ್ರೀ ವಿಶ್ವನಾಥರ ಅಗಲಿಕೆ. ಗೀತಾ ಅವರ ಪ್ರತಿಯೊಂದು ನಾಟಕಕ್ಕೂ ವಿಶ್ವನಾಥರ ಪ್ರೋತ್ಸಾಹ, ಸಹಕಾರವಿದ್ದೇ ಇರುತ್ತಿತ್ತು. ಜೊತೆಗೆ ಸಂಯೋಜನೆಯ ಹೊಣೆಯೂ ಅವರದ್ದೇ ಆಗಿರುತಿತ್ತು. ಈ ನಾಟಕಕ್ಕೂ ಸಂಗೀತ ಸಂಗೀತವನ್ನು ಸಂಯೋಜಿಸಿದ್ದು ಅವರೇ. ನಾಟಕ ಪ್ರದರ್ಶನ ಕಾರಣಾಂತರಗಳಿಂದ ತಡವಾಗದೆ ಮೊದಲೇ ನಿರ್ಧರಿಸಿದಂತೆ 1-12-95ರಂದು ಪ್ರದರ್ಶನ ಗೊಂಡಿದ್ದರೆ ಅವರೂ ನಮ್ಮೊಡನಿದ್ದು ನಾಟಕದ ಆನಂದವನ್ನು ಸವಿಯ ಬಹುದಿತ್ತೇನೋ. ನಾಟಕವನ್ನು ಪ್ರದರ್ಶಿಸಿದ ಮರುದಿನವೇ ಗಂಡ ಹೆಂಡತಿ ಇಬ್ಬರೂ ಬಹರೇನ್ನಲ್ಲಿರುವ ಮಗಳ ಮನೆಗೆ ಹೋಗಿ ಮೊಮ್ಮಗನ ಜೊತೆ ಕೆಲದಿನಗಳನ್ನು ಸಂತೋಷವಾಗಿ ಕಳೆಯಬೇಕೆಂದು ಯೋಚಿಸಿಕೊಂಡಿದ್ದರು. ಈ ನಾಟಕ ಆಡುವುದರ ಮೂಲಕ ಅವರಿಗೆ ನಮ್ಮ ಕೊನೆಯ ನಮಸ್ಕಾರವನ್ನು ಕೊಡಿಸಿದೆ.

— ಭವಾನಿ

## ಹೀಗಿತ್ತು ಅಸೋಸಿಯೇಷನ್

ಅಸೋಸಿಯೇಷನ್‌ನ ಅರವತ್ತಕ್ಕೂ ಹೆಚ್ಚು ವರ್ಷಗಳ ಇತಿಹಾಸದಲ್ಲಿ ಘಟಿಸಿರಬಹುದಾದ ಉಲ್ಲೇಖನಾರ್ಹ, ಸ್ವಾರಸ್ಯಕರ ಘಟನೆಗಳು ಅಸಂಖ್ಯ. ಕಾಲಕ್ರಮೇಣ ಹೊಸ ಪೀಳಿಗೆಯ ಜನ ಅಸೋಸಿಯೇಷನ್‌ನಲ್ಲಿ ಹೆಚ್ಚು ಹೆಚ್ಚು ಸಕ್ರಿಯ ಪಾತ್ರ ವಹಿಸುತ್ತಾ ಹೋಗಿ, ಇಂಥಾ ಸಂಗತಿಗಳು ಬಹುತೇಕ ಸದಸ್ಯರಿಗೆ ತಿಳಿದಿರುವ ಸಾಧ್ಯತೆ ಕಡಿಮೆ. ಹಾಗೆಯೇ ಅಸೋಸಿಯೇಷನ್ ಅನ್ನೂ ಬಹಳ ಹಿಂದಿನಿಂದ ಕಂಡು ಬಲ್ಲ ಹಿರಿಯ ಸದಸ್ಯರನೇಕರಲ್ಲಿ ಇಂಥಾ ಘಟನೆಗಳ ಖಜಾನೆಯೇ ಅಡಗಿರಬಹುದು.

ತಮ್ಮ ಅನುಭವಗಳನ್ನು ನಮ್ಮೆಲ್ಲರೊಂದಿಗೆ ಹಂಚಿ ಕೊಳ್ಳಲು ಈ ಹಿರಿಯರನ್ನು ಮೈಸೂರು ಅಸೋಸಿಯೇಷನ್ ಮುಖವಾಣಿ 'ನೇಸರು' ಆಹ್ವಾನಿಸುತ್ತದೆ.

ದಯವಿಟ್ಟು ಹಿಂದೆ ನೀವು ಕಂಡ, ಕೇಳಿದ, ಅನುಭವಿಸಿದ ಮೈಸೂರು ಅಸೋಸಿಯೇಷನ್‌ಗೆ ಸಂಬಂಧಪಟ್ಟ ಘಟನೆಗಳನ್ನು ಚಿಕ್ಕದಾಗಿ ನಮಗೆ ಬರೆದು ಕಳಿಸಿ. ಸ್ವಾರಸ್ಯಕರವಾದ ಬರಹಗಳನ್ನು 'ನೇಸರು' ಪತ್ರಿಕೆಯಲ್ಲಿ ಕ್ರಮವಾಗಿ ಪ್ರಕಟಿಸಲಾಗುತ್ತದೆ.

## ನಾಟಕ ಜಾತ್ರೆ

ಜನವರಿ 26ರಂದು ಕರ್ನಾಟಕ ಸಂಘದಲ್ಲಿ ವರಕವಿ ಬೇಂದ್ರೆಯವರ ಶತಾಬ್ದಿಯನ್ನು ಆಚರಿಸಲಾಯಿತು. ಇದರ ಅಂಗವಾಗಿ ಬೇಂದ್ರೆಯವರ ಎರಡು ಕಿರು ನಾಟಕಗಳನ್ನು ಅಂದು ಆಡಲಾಯಿತು. `ಸಾಯೋ ಆಟ'ವನ್ನು ಭರತ್ ಕುಮಾರ್ ಪೊಲಿಪು ಅವರು ನಿರ್ದೇಶಿಸಿದ್ದರು. `ಜಾತ್ರೆ' ನಾಟಕವನ್ನು ಡಾ। ಮಂಜುನಾಥರ ನಿರ್ದೇಶನದಲ್ಲಿ ಮೈಸೂರು ಅಸೋಸಿಯೇಷನ್ನಿನ ಕಲಾವಿದರು ಆಡಿದರು. ಜಾನಪದ ಶೈಲಿಯಲ್ಲಿ ಅಳವಡಿಸಿದ ಈ ನಾಟಕದಲ್ಲಿ ಹಾಡುಗಳು, ನೃತ್ಯ, ಮೆರವಣಿಗೆ ಇತ್ಯಾದಿಗಳು ಸೇರಿದ್ದವು. ಪುಟ್ಟ ಮಕ್ಕಳಿಂದ ಹಿಡಿದು ದೊಡ್ಡವರ ವರೆಗೆ 25 ಜನರು ಭಾಗವಹಿಸಿದ್ದರು.



`ಜಾತ್ರೆ' ನಾಟಕದ ಒಂದು ದೃಶ್ಯ

## ಮಾಘ ಗಣೇಶ ಜಯಂತಿಯ ಉತ್ಸವ

ಜನವರಿ 23ರಂದು ಅಸೋಸಿಯೇಷನ್ನಿನಲ್ಲಿ ಮಾಘ ಗಣೇಶ ಜಯಂತಿಯನ್ನು ಆಚರಿಸಲಾಯಿತು. ಅಂದಿನ ಸಂಜೆ ವಿಶೇಷ ಪೂಜೆ ಏರ್ಪಡಿಸಲಾಗಿತ್ತು. ಬಹಳ ಜನ ಸದಸ್ಯರು ಪೂಜೆಯಲ್ಲಿ ಭಾಗವಹಿಸಿದ್ದರು. ಸಂಜೆ 7-30ರಿಂದ 9-00ರ ವರೆಗೆ ಪೂಜೆಯು ಸಾಗಿತು. ನಂತರ ಮಹಾ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗವಾಯಿತು.

⁂

## ಶಿವರಾತ್ರಿಯಯಂದು ಭಜನೆ

ಅಸೋಸಿಯೇಷನ್ನಿನಲ್ಲಿ ಫೆಬ್ರುವರಿ 17ರಂದು ಸಂಜೆ 4ರಿಂದ 6ರವರೆಗೆ ಶ್ರೀಮತಿ ಸೀತಮ್ಮ ರಾವ್ ಮತ್ತು ಸಂಗಡಿಗರಿಂದ ಭಜನೆ ಇದೆ. ಎಲ್ಲರಿಗೂ ಆದರದ ಸ್ವಾಗತ

## ಅಭಿನಂದನೆಗಳು

### ಶ್ರೀ ಬಿ. ಎ. ಸನದಿ

ಮುಂಬೈಯ ಸುಪ್ರಸಿದ್ಧ ಕವಿ ಶ್ರೀ ಬಿ. ಎ. ಸನದಿಯವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪುರಸ್ಕಾರ ದೊರೆತಿದೆ. ಮುಂಬಯಿಯ ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವಲ್ಲಿ ಗಣನೀಯ ಪಾತ್ರವಹಿಸಿದ ಸನದಿಯವರು `ಮಾನವ್ಯಕವಿ' ಎಂದು ಪ್ರಖ್ಯಾತರಾಗಿದ್ದಾರೆ. 13 ಕವನ ಸಂಕಲನಗಳು, 3 ವಿಮರ್ಶಗ್ರಂಥಗಳು ಹಾಗೂ ಎರಡು ಕಥಾ ಸಂಕಲನಗಳನ್ನು ಸಾಹಿತ್ಯ ಲೋಕಕ್ಕಿತ್ತಿರುವ ಸನದಿಯವರು ಮುಂಬಯಿಯ ಕನ್ನಡಿಗರಿಗೆ ಚಿರಪರಿಚಿತರು. ನೇಸರು ಈ ಸಂದರ್ಭದಲ್ಲಿ ಅವರಿಗೆ ಸದಾ ಹಾರ್ದಿಕ ಶುಭಾಶಯಗಳನ್ನು ಕೋರುತ್ತದೆ.

### ಅರ್ಜುನ

ನಮ್ಮ ಸದಸ್ಯರಾದ ಲಲಿತಾ ಮತ್ತು ಬಾಲು ಅವರ ಮಗ ಅರ್ಜುನನಿಗೆ ಇತ್ತೀಚೆಗೆ ಮುಂಬೈಯಿನ ವಸಂತ ದಾದಾ ಪಾಟಿಲ್ ಕಾಲೇಜ್ ಆಫ್ ಎಂಜಿನಿಯರಿಂಗ್‌ನವರು ಏರ್ಪಡಿಸಿದ್ದ ``ಫ್ಯೂರ್ಷ್ 96'' ಅಂತರ್ ಕಾಲೇಜು ಉತ್ಸವದಲ್ಲಿ `ಕ್ವಾಸ್‌ವರ್ಡ್ಸ್'ನಲ್ಲಿ ಮೊದಲನೆಯ ಬಹುಮಾನವೂ, `ಎಡ್ವರ್ಟೈಸಿಂಗ್ ಕ್ವಿಜ್'ನಲ್ಲಿ ಎರಡನೆಯ ಬಹುಮಾನವೂ ಮತ್ತು `ಕನ್ನೆಕ್ಷನ್ಸ್' ಎಂಬ ಸ್ಪರ್ಧೆಯಲ್ಲಿ ಮೂರನೆಯ ಬಹುಮಾನವೂ ದೊರಕಿದೆ.

### H. S. ನೀಲಕಂಠ

ಕಳೆದ ವರ್ಷ, ರಜೆಯಲ್ಲಿ ಬೆಂಗಳೂರಿಗೆ ಹೋಗಿದ್ದ H. S. ನೀಲಕಂಠ ಅವರು ಅಲ್ಲಿನ YMCAಯ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಟೂರ್ನಮೆಂಟಿನಲ್ಲಿ ಭಾಗವಹಿಸಿ ವಿಜೇತರಾದರು.

ಈಗ ಕೆಲವು ದಿನಗಳ ಹಿಂದೆ ಈ ವರ್ಷದ ಟೂರ್ನಮೆಂಟ್‌ನ್ನು ಏರ್ಪಡಿಸಿದಾಗ, YMCAನವರು ಕಳೆದ ವರ್ಷ ವಿಜೇತರಾದ ನೀಲಕಂಠರವರಿಗೆ ಈ ವರ್ಷದ ಟೂರ್ನಮೆಂಟಿನಲ್ಲಿ ಭಾಗವಹಿಸಲು ಆಹ್ವಾನವಿತ್ತರು. ನೀಲಕಂಠರವರು ಮತ್ತೊಮ್ಮೆ ಈ ಆಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾಗಿ ಹಿಂತಿರುಗಿದ್ದಾರೆ.

**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

**Agents For**
**INDIAN AIR LINES, EAST WEST, MODI LUFT & JET AIRLINES**

**REGD. OFFICE:**
3/15 ASHIANA, SECTOR 17,
VASHI, NEW BOMBAY.
PHONE: 768 25 91 * 768 25 58
767 09 02
GRAMS: AUGTRASERV
**ALSO AT:**
2/16, KABBUR HOUSE,
SION (E), BOMBAY-400 022.
PHONE: 407 29 84 * 409 35 73
* 407 77 50

# ಸುತ್ತ ಮುತ್ತ

ನಮ್ಮ ಸುತ್ತ ಮುತ್ತ ಎಷ್ಟೆಲ್ಲಾ ಸಭೆ ಸಮಾರಂಭಗಳು ಜರಗುತ್ತಿವೆ! ಮುಂಬೈನ ಯಾಂತ್ರಿಕ ಬದುಕು, ಸಮಯದ ಒತ್ತಡ, ವಿಭಿನ್ನ ಆಸಕ್ತಿ ಅಭಿರುಚಿಯಿಂದಾಗಿ ಬಹಳಷ್ಟು ಸಂಗತಿಗಳು ನಮ್ಮ ಗಮನಕ್ಕೆ ಬರುವುದಿಲ್ಲ. 1996 ಜನವರಿ ತಿಂಗಳ ಪ್ರತಿ ವಾರಾಂತ್ಯದಲ್ಲಿ ಒಂದಲ್ಲ ಒಂದು ಕನ್ನಡ ಸಂಘ ಸಂಸ್ಥೆ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದು, ಕಾರ್ಯಕ್ರಮಗಳು ಬಿರುಸಿನಿಂದ ನಡೆದವು. ಒಂದೇ ದಿನ ನಗರದ ಬೇರೆ ಬೇರೆ ಮೂಲೆಗಳಲ್ಲಿ ಒಳ್ಳೆಯ ಕಾರ್ಯಕ್ರಮಗಳಿದ್ದು ಎರಡೂ ಭಾಗವಹಿಸುವುದು ಅಸಾಧ್ಯ ಎಂಬ ಅನಿವಾರ್ಯತೆ ಕೆಲವರನ್ನಾದರೂ ಕಾಡಿದ್ದಿತು.

ಒಮ್ಮಿಂದೊಮ್ಮೆಗೆ ಗಮನಕ್ಕೆ ಬರುವಂತೆ ನಡೆದ ಚಟುವಟಿಕೆಯ ಹಿಂದಿರುವ ವ್ಯವಸ್ಥಾಪಕರ ಕಾರ್ಯಕರ್ತರ ಉತ್ಸಾಹ ಮೆಚ್ಚುವಂತಹದು. ದಿನವಿಡೀ ನಡೆದ ಕೆಲವು ಕಾರ್ಯಕ್ರಮಗಳಲ್ಲಿ ತಿಂಡಿ-ಕಾಫಿ-ಊಟದ ವ್ಯವಸ್ಥೆಯೂ ಸೇರಿತ್ತು. ಸಂಗೀತ -ನಾಟಕ - ನೃತ್ಯ - ಸಾಹಿತ್ಯ ಜನರ ಮನ ರಂಜಿಸಿದರೆ, ಪುಸ್ತಕ ಪ್ರದರ್ಶನ, ಪುಸ್ತಕ ಬಿಡುಗಡೆ ಸಮಾರಂಭ ಜನರ ಕುತೂಹಲ ಕೆರಳಿಸಿದ್ದವು. ಜನವರಿ ತಿಂಗಳಲ್ಲಿ ನಮ್ಮ ಸುತ್ತ ಮುತ್ತ ನಡೆದ ಕನ್ನಡ ಸಂಘ-ಸಂಸ್ಥೆಗಳ ಕೆಲವು ಮುಖ್ಯ ಸಮಾರಂಭಗಳನ್ನು ನೇಸರು ಓದುಗರ ಗಮನಕ್ಕೆ ತರುತ್ತಿದ್ದೇವೆ.

ಜನವರಿ 6 ಮತ್ತು 7ರಂದು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಹಾಗೂ ಪ್ರಸಾರಾಂಗ ಗುಲ್ಬರ್ಗಾ ವಿಶ್ವವಿದ್ಯಾಲಯ ಇವರ ಸಂಯುಕ್ತ ಆಶ್ರಯದಲ್ಲಿ ಕನ್ನಡ ಜ್ಞಾನಪೀಠ ಪ್ರಶಸ್ತಿ ವಿಜೇತರನ್ನು ಕುರಿತ ವಿಶೇಷ ಉಪನ್ಯಾಸಗಳು, ಎರಡೂ ವಿಶ್ವವಿದ್ಯಾಲಯಗಳು ಪ್ರಕಟಿಸಿರುವ ಪುಸ್ತಕಗಳು ಪ್ರಪ್ರದರ್ಶನ -ಮಾರಾಟ ನಡೆಯಿತು. ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಡಾ|| ಎನ್. ರುದ್ರಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಡಾ|| ಜಿ. ಡಿ. ಜೋಷಿ ಮತ್ತು ಶ್ರೀ ಬಿ. ಎ. ಸನದಿ ಅವರ ಅಧ್ಯಕ್ಷತೆಯಲ್ಲಿ ಎರಡು ಗೋಷ್ಠಿಗಳು ನಡೆಯಿತು.

ಜನವರಿ 7ರಂದು ಮಾತುಂಗಾದಲ್ಲಿರುವ ಮುಂಬೈ ಕನ್ನಡ ಸಂಘ ತನ್ನ ವಜ್ರ ಮಹೋತ್ಸವವನ್ನು ವಿಶ್ವೇಶ್ವರಯ್ಯ ಹಾಲ್‌ನಲ್ಲಿ ಆಚರಿಸಿತು. ಕರ್ನಾಟಕ ಸರ್ಕಾರದ ಕೈಗಾರಿಕಾ ಮಂತ್ರಿಗಳಾದ ಶ್ರೀ ದೇಶ್‌ಪಾಂಡೆ ಸಭೆಯ ಅಧ್ಯಕ್ಷರಾಗಿದ್ದರು. ಮಹಾರಾಷ್ಟ್ರ ಸರ್ಕಾರದ ಗೃಹ ನಿರ್ಮಾಣ ಮತ್ತು ಕೊಳಚೆಗೇರಿ ಸುಧಾರಣಾ ಮಂತ್ರಿಗಳಾದ ಪ್ರಕಾಶ್ ಮೆಹ್ತ ಮುಖ್ಯ ಅತಿಥಿಗಳಾಗಿದ್ದರು. ನಗರದ ಗಣ್ಯರಿಗೆ ಸನ್ಮಾನ ಮಾಡಲಾಯಿತು. `ಪ್ರಮೀಳಾ ಸಂಧಾನ' ಮತ್ತು `ಬಬ್ರುವಾಹನ ಕಾಳಗ' ಯಕ್ಷಗಾನಗಳನ್ನು ಮುಂಬೈನ ಗೀತಾಂಬಿಕಾ ಕೃಪಾ ಪೋಷಿತ ಯಕ್ಷಗಾನ ಮಂಡಳಿ ನಡೆಸಿಕೊಟ್ಟಿತು.

ಜನವರಿ 13ಮತ್ತು 14ರಂದು ಸಂಜೆ ಕರ್ನಾಟಕ ಸಂಘ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಜಂಟಿ ಕಾರ್ಯಕ್ರಮ ವಿಶ್ವೇಶ್ವರಯ್ಯ ಹಾಲ್‌ನ ಕಿರು ಸಭಾಗೃಹದಲ್ಲಿ ಏರ್ಪಡಿಸಲಾಗಿತ್ತು. `ನಗರ ಸಂವೇದನೆ' ಮತ್ತು `ಭಾರತೀಯ ಕಾವ್ಯ ಸಂವೇದನೆ' ಎಂಬ ಎರಡು ಸಾಹಿತ್ಯ ಗೋಷ್ಠಿಗಳು ಅಂತರ ಭಾರತ ಕವಿ ಸಮ್ಮೇಳನ ಮತ್ತು ಪುಸ್ತಕ ಪ್ರದರ್ಶನ ನಡೆಯಿತು.

ಜನವರಿ 20ರಂದು `ಸಾಹಿತ್ಯ ಪ್ರಕಾಶನ' ಮುಂಬಯಿ ಪ್ರಕಟಿಸಿರುವ ಕು|| ಜಿ. ಪಿ. ಕುಸುಮ ಅವರ ಮೊದಲ ಕವನ ಸಂಕಲನ `ಪರುಷ' ಬಿಡುಗಡೆ ಮಾಡಲಾಯಿತು. ಪ್ರಾಂಶುಪಾಲ ಡಾ|| ಜಿ. ಡಿ. ಜೋಶಿ ಸನ್ಮಾನ ಸಮಿತಿಯ ಯೋಜನೆಯಲ್ಲಿ ಪ್ರಕಟಗೊಂಡ ಕವನ ಸಂಕಲನವನ್ನು ಪ್ರಾ| ಸುನಿತಾ ಶೆಟ್ಟಿ ಬಿಡುಗಡೆ ಮಾಡಿದರು. ಶ್ರೀ ಸನದಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಗೆ ಶ್ರೀ ಅರವಿಂದ ನಾಡಕರ್ಣಿ ಮುಖ್ಯ ಅತಿಥಿಗಳಾಗಿದ್ದರು. ಶ್ರೀ ಶ್ರೀನಿವಾಸ ಜೋಕಟ್ಟೆ ಮತ್ತು ಶ್ರೀಮತಿ ಸುಶೀಲಾ ಎನ್. ಶೆಟ್ಟಿ ಕೃತಿ ವಿಮರ್ಶೆ ಮಾಡಿದರು.

ಜನವರಿ 21ರಂದು ಡೊಂಬಿವಲಿಯ ಮೈಸೂರು ಸಂಗೀತ ವಿದ್ಯಾಲಯ ಶ್ರೀ ಪುರಂದರ ದಾಸ ಮತ್ತು ತ್ಯಾಗರಾಜರ ಆರಾಧನಾ ಉತ್ಸವದ ಅಂಗವಾಗಿ ಸಂಗೀತೋತ್ಸವ ನಡೆಸಿತು. ಕರ್ನಾಟಕ ಸಂಗೀತ -ನೃತ್ಯ ಅಕಾಡೆಮಿಯ ಅಧ್ಯಕ್ಷೆ ಶ್ರೀಮತಿ ಚಂದ್ರಭಾಗಾದೇವಿ ಸಂಗೀತೋತ್ಸವ ಉದ್ಘಾಟಿಸಿದರು. ಶ್ರೀ ಯು. ಎನ್. ಕೃಷ್ಣರಾವ್ ಮುಖ್ಯ ಅತಿಥಿಗಳಾಗಿದ್ದರು. ದಿನವಿಡೀ ಸಂಗೀತ ಕಾರ್ಯಕ್ರಮ ಜರುಗಿತು.

ಜನವರಿ 26, 27, 28ರಂದು ಕರ್ನಾಟಕ ಸಂಘ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ -ಬೆಂಗಳೂರು ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಮೂರು ದಿನಗಳ ಅದ್ದೂರಿಯ ಸಾಂಸ್ಕೃತಿಕ ಹಬ್ಬ ನಡೆಯಿತು. 26ರ ಸಂಜೆ ಕವಿವರ ಬೇಂದ್ರೇ ಶತಾಬ್ದಿ ನಿಮಿತ್ತ ಬೇಂದ್ರೆಯವರು ರಚಿಸಿದ ಎರಡು ನಾಟಕಗಳು ಪ್ರದರ್ಶನಗೊಂಡವು. ಶ್ರೀ ಭರತ್ ಕುಮಾರ್ ಪೊಲಿಪು ಅವರ ನಿರ್ದೇಶನದಲ್ಲಿ `ಸಾಯೋ ಆಟ'; ಡಾ|| ಮಂಜುನಾಥರ ನಿರ್ದೇಶನದಲ್ಲಿ `ಜಾತ್ರೆ' ನಾಟಕಗಳು ಸಭಿಕರನ್ನು ರಂಜಿಸಿದವು.

27ರಂದು ಸಂಜೆ `ಹಾಸ್ಯ ರಸದೌತಣ' ಕಾರ್ಯಕ್ರಮ ಮುಂಬೈ ನಗರದ ಹಿರಿಯ ಹಾಗೂ ಉದಯೋನ್ಮುಖಿ ಕವಿಗಳು ನಡೆಸಿಕೊಟ್ಟರು. ಸಮಾವೇಶದ ಸಾರಥ್ಯ ಪ್ರಾ|| ಸುನೀತಾ ಎಂ. ಶೆಟ್ಟಿ ವಹಿಸಿದ್ದರು.

ಅದೇ ಸಂಜೆ ಬೆಂಗಳೂರಿನ ಖ್ಯಾತ ಕಲಾವಿದೆ ಶ್ರೀಮತಿ ಸುಮಾ ವಿಜಯ್ ತಂಡದವರಿಂದ `ವಿಜಯ ಕಲ್ಯಾಣ'ಯೆಂಬ ನೃತ್ಯರೂಪಕ ನಡೆಯಿತು. ಡಾ|| ವ್ಯಾಸರಾಯ ನಿಂಜೂರರ `ನಲವತ್ತರ ನಲುಗು' ನಾಟಕದ ಬಿಡುಗಡೆ ಹಾಗೂ ಶ್ರೀ ಸದಾನಂದ ಸುವರ್ಣರ ದತ್ತಿ ರಂಗೋಪನ್ಯಾಸ ನಡೆಯಿತು.

28ರ ಸಂಜೆ `ಧ್ವನಿ ಸಂಸ್ಥೆ'ಯವರಿಂದ ನಡೆಸಿಕೊಟ್ಟ ಅಮೋಘ ಸಂಗೀತ ಕಾರ್ಯಕ್ರಮದಲ್ಲಿ ಕರ್ನಾಟಕದ ಸುವಿಖ್ಯಾತ ಸಂಗೀತ ಕಲಾವಿದರಾದ ಶಿವಮೊಗ್ಗ ಸುಬ್ಬಣ್ಣ, ನರಸಿಂಹ ನಾಯಕ್, ಜಿ. ವಿ. ಅತ್ರಿ, ಮಾಲತಿ ಶರ್ಮ ಮತ್ತಿತರು ಹಾಡಿದರು.

27ಜನವರಿ ಸಂಜೆ ಅಣುಶಕ್ತಿ ನಗರದ `ಕನ್ನಡ ಮಿತ್ರವೃಂದ' ಶರಣರ ಮತ್ತು ಸಂತರ' ದಿನಾಚರಣೆಯನ್ನು ಆಚರಿಸಿತು. ಕಾರ್ಯಕ್ರಮದಲ್ಲಿ ಧ್ವನಿ ಸಂಸ್ಥೆಯವರು ಶರಣರ ಮತ್ತು ಸಂತರ ಗೀತೆಗಳು ಹಾಡಿದರು.

ಜನವರಿ 28ರಂದು ಬೆಳಗ್ಗೆ ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕ, ಮುಂಬಯಿ ಇವರ ಆಶ್ರಯದಲ್ಲಿ ಮುಂಬಯಿ ಕೃತಿ ವಿಮರ್ಶೆ ಮತ್ತು ಬೇಂದ್ರೆ ಶತಮಾನೋತ್ಸವ ಆಚರಣೆ ನಡೆಯಿತು. ಡಾ|| ಹಂಪನಾ, ಡಾ| ಕಮಲಾ ಹಂಪನಾ ಮತ್ತು ಮುಂಬಯಿ ಲೇಖಕರ ಗ್ರಂಥ ಪ್ರದರ್ಶನವನ್ನು ಡಾ| ವ್ಯಾಸರಾವ್ ನಿಂಜೂರ್ ಉದ್ಘಾಟಿಸಿ ಕೃತಿ ವಿಮರ್ಶೆಯ ಅಧ್ಯಕ್ಷತೆ ವಹಿಸಿದರು.

ಮಧ್ಯಾಹ್ನ ನಡೆದ ಬೇಂದ್ರೆ ಶತಮಾನೋತ್ಸವ ಆಚರಣೆಯಲ್ಲಿ ಪ್ರೊ|| ಎಸ್. ಪಿ. ಪದ್ಮಪ್ರಸಾದ್ ಭಾಷಣ ಮಾಡಿದರು. ಡಾ|| ಹಂಪ ನಾಗರಾಜಯ್ಯ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಗಜಾನನ ಯಾಜಿ ಮತ್ತು ಸಂಗಡಿಗರು, ಶ್ರೀ ವಾಸು ಪೊಯ್ಯ ಮತ್ತು ಸಂಗಡಿಗರಿಂದ ಬೇಂದ್ರೆ ಗೀತಗಳ ಗಾಯನ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮ ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕ ಮತ್ತು ಸಾಹಿತ್ಯ ಬಳಗ ಮುಂಬೈ ಇವರ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಗಿತ್ತು.

ಸಂಜೆ ಡಾ| ಹಂಪನಾ, ಡಾ| ಕಮಲಾ ಹಂಪನಾ ಮತ್ತು ಶ್ರೀ ಬಿ. ಎ. ಸನದಿಯವರನ್ನು ಸನ್ಮಾನಿಸಲಾಯಿತು. ಮುಂಬಯಿ ಕವಿಗಳ ಕವನ ಸಂಕಲನವು `ಸಹಸ್ಪಂದನ'ವನ್ನು ಪ್ರಾ. ಈರಣ್ಣ ಇಟಗಿ (ಹೊಸಪೇಟೆ) ಬಿಡುಗಡೆ ಮಾಡಿದರು. ಕಮಲಾ ಹಂಪನಾ ಹಾಗೂ ಸನದಿಯವರ ಗೀತೆಯನ್ನು ಹಾಡಲಾಯಿತು. ಮುಂಬಯಿ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಧೀಶರಾದ ಶ್ರೀ ಎಚ್. ಸುರೇಶ್ ಗೌರವ ಅತಿಥಿಗಳಾಗಿದ್ದರು.

SCIENCE

# OZONE - A Boon or Bane?

In the recent years, we have been reading a lot about the depletion of the protective layer of Ozone in the stratosphere. Ozone helps in filtering the ultra violet rays in the sunlight and with the depletion of Ozone, this function is effected, resulting in warming up of the earth. This is known as the "Green House Effect". There are regions where the Ozone layer is totally depleted to form large holes, brought about by chemicals called Chloroflurocarbons. One such massive hole in the Ozone layer is over the Antartic region, leading to the melting of the snow cap there. Scientists feel that, apart from the global warming, depletion of Ozone layer leads to skin burn and diseases like cancer. Infact, they feel that, if this depletion is not checked, by limiting or stopping the use of Chloroflurocarbons, earth will turn into a sick planet in the near future.

About three years ago, an Indian research team working in South India, found that during summer, the ultra violet radiation levels were disturbingly high. This finding is of significance, since the Ozone layer over that region is intact and undepleted. A lot of research has been conducted in the recent years, which throw new light on the peculiar properties of Ozone.

. Ozone, while a boon to mankind, when it is at the stratosphere, appears to be a bane, when it is at the terrestrial level. Ozone is made up of 3 atoms of Oxygen. It is created when electricity or ultra violet radiation splits the Oxygen molecule into Oxygen atoms. The free Oxygen atom combines with the Oxygen molecule to form Ozone. Urban pollutants like motor vehicle exhaust, which contains particulate matter and nitrogenous gases, produce Ozone due to a photochemical reaction. Ozone, being unstable, rapidly changes into Oxygen and releases a free Oxygen atom. This free Oxygen atom reacts with many gases and substances, with which normal Oxygen can not react. Ozone is responsible for the formation of smog at the ground level.

At the ground level, Ozone has been found to be a pollutant which causes respiratory problems, nasal congestion, reduced resistance to infections and premature aging of the lung tissues. Studies conducted on healthy individuals showed that, exposure to Ozone for 6 to 8 hours, caused serious respiratory problems. Many countries like USA, UK and Germany, have stipulated the maximum permissible limits for the level of Ozone in the air, under their environment protection act. However, recent studies have shown that these levels are quite high and need to be brought down, in the light of the current research findings. Unfortunately, in our country, though there are agencies measuring the quality of air, no measurement of Ozone seems to have been made regularly by them. If this were to be done, all the metros in India would perhaps show more than the desired levels of Ozone in the air.

These research findings have prompted a lot of action. Firstly, the use of Chloroflurocarbons - which deplete the Ozone layer - are being reduced progressively. These chemicals are being replaced in the industry by alternate non - Ozone - depleting chemicals. More accurate ways of measuring Ozone are being devised. Global Ozone Measuring Experiment (GOME) has been launched in which, a satellite is being put in space to measure Ozone and trace gases in the earth's atmosphere. Unlike the earlier devices, which could measure Ozone levels only in the stratostrophere, GOME can measure Ozone and trace gases at lower levels also. Research and better understanding should help us to avoid the man made miseries, created by the industrialisation & mechanisation and improve the quality of life on this planet.


### MATRIMONIAL

Wanted a Professionally qualified boy 28-30 years for a Kannada Smartha Brahmin Girl, 5'3", Employed in a multinational firm and doing C.A.

Please write to Box No. 108 Nesaru

***

Smartha Brahmin parents Vathula Gothra hailing from Karnataka settled in Bombay for more than six decades seek alliance for their daughter post Graduate (M.Sc.) lecturer Age 28, Height 5' 1" Nakshtra Ravati smart charming personality progressive out look home loving. Well qualified progressive out look home loving. Well qualified professionals, well settled Brahmin boys aged upto 33 years may please reply to Box No. 109, Nesaru

ಸಾಹಿತ್ಯ:

# 'ಜ್ಞಾನಪೀಠ ಪ್ರಶಸ್ತಿ' ಹಾಗೆಂದರೇನು?

- ಪ್ರೊ| ರಘುನಾಥ್

**ಇತ್ತೀಚೆಗಷ್ಟೆ ಜ್ಞಾನಪೀಠ ಪ್ರಶಸ್ತಿಯನ್ನು ಘೋಷಿಸಲಾಯಿತು. ಭಾರತೀಯ ಸಾಹಿತ್ಯದಲ್ಲೇ ಹೆಚ್ಚು ಬಾರಿ ಜ್ಞಾನಪೀಠ ಪ್ರಶಸ್ತಿ ಪಡೆದ ಏಕೈಕ ಭಾಷೆ ಕನ್ನಡ ಎಂಬ ಹೆಮ್ಮೆ ಮತ್ತೊಮ್ಮೆ ಮೂಡುತ್ತಿದೆ. 'ಜ್ಞಾನಪೀಠ' ಪ್ರಶಸ್ತಿ - ಹಾಗೆಂದರೇನು? ಲೇಖನದಲ್ಲಿ ಪ್ರೊ|ರಘುನಾಥರು ಪ್ರಶಸ್ತಿಯ ಸ್ಥಾಪನೆ, ಉದ್ದೇಶ, ನಿಯಮಗಳನ್ನು ತಿಳಿಸಿಕೊಟ್ಟಿದ್ದಾರೆ.**

## ಭಾರತೀಯ ಜ್ಞಾನಪೀಠ ಪ್ರಶಸ್ತಿ
## ಸ್ಥಾಪನೆ - ಉದ್ದೇಶ:

1944 ಫೆಬ್ರವರಿ 14ರಂದು ಅಖಿಲ ಭಾರತ ಪ್ರಾಚ್ಯವಿದ್ಯಾ ಸಮ್ಮೇಳನದ 12ನೆಯ ಅಧಿವೇಶನ ವಾರಣಾಸಿಯಲ್ಲಿ ಸಮಾವೇಶಗೊಂಡಿತ್ತು. ಅಂದಿನ ಆ ಸಮಾವೇಶಕ್ಕೆ ಗತಿಸುತ್ತಿರುವ ಅಪೂರ್ವ ಸಾಹಿತ್ಯ ಕೃತಿಗಳನ್ನು ಕುರಿತ ಸಂಪಾದನೆ, ಸಂಶೋಧನೆಗಳಿಗೆ ಪ್ರೋತ್ಸಾಹವಿತ್ತು ಅವುಗಳನ್ನು ಬೆಳಕಿಗೆ ತರುವುದು ಹಾಗೂ ಸಮಕಾಲೀನ ಸೃಜನಾತ್ಮಕ ಕೃತಿರತ್ನಗಳನ್ನು ಪ್ರಚಾರ ಪಡಿಸಿ ಕೃತಿಕಾರರನ್ನು ಗೌರವಿಸುವುದು ಎಂಬ ಒಂದು ನಿಯಮವನ್ನು ಸರ್ವಾನುಮತದಿಂದ ಸ್ವೀಕರಿಸಿತು.

ಇದರ ಹೊಣೆಯನ್ನು ಭಾರತೀಯ ಸಂಸ್ಕೃತಿ ನಾಗರೀಕತೆಗಳ ಬಗ್ಗೆ ವಿಶೇಷ ಆಸಕ್ತಿಯಿದ್ದ ಕೈಗಾರಿಕೋದ್ಯಮಿ ಶ್ರೀ ಸಾಹು ಶಾಂತಿ ಪ್ರಸಾದ್ ಜೈನ್ ಅವರಿಗೆ ವಹಿಸಲಾಯಿತು. ಅಂದೇ ಶ್ರೀ ಜೈನ್ ಅವರಿಂದ 'ಭಾರತೀಯ ಜ್ಞಾನಪೀಠ'ದ ಪ್ರತಿಷ್ಠಾಪನೆಯ ಘೋಷಣೆಯಾಯಿತು. ಅವರು `ಭಾರತೀಯ ಜ್ಞಾನಪೀಠ' ಎಂಬ ವಿಶಿಷ್ಟ ಹೆಸರಿತ್ತು ಆ ಸಂಸ್ಥೆಯ ಸಂಸ್ಥಾಪಕರಾದರು. ಅವರ ಪತ್ನಿ ಶ್ರೀಮತಿ ರಮಾ ಜೈನ್ ಅದರ ಅಧ್ಯಕ್ಷರಾದರು.

ಈ ಸಂಸ್ಥೆಯ ಕಾರ್ಯದ ಪ್ರಾರಂಭ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರಿ ಚೈತ್ಯಾಲಯದ ಶಾಸ್ತ್ರ ಭಂಡಾರದಲ್ಲಿ ದೊರೆತ ಒಂದು ಪ್ರಾಚೀನ ಓಲೆಪ್ರತಿಯ ಅಪಭ್ರಂಶ ಪರಿಷ್ಕೃತ ಪ್ರಕಟನೆಯೊಂದಿಗೆ ಆಯಿತು. 11ನೇ ಶತಮಾನದ ಜೈನಯತಿ ಭಗವನ್ತ ಭೂತಬಲಿ ಎಂಬುವರು ರಚಿಸಿರುವ `ಮಹಾಬಂಧ' ಎಂಬ ಕೃತಿಯನ್ನು `ಭಾರತೀಯ ಜ್ಞಾನಪೀಠ' ಪ್ರಶಸ್ತಿ ಸಂಸ್ಥೆ ಪ್ರಕಟಿಸಿತು. ಶ್ರೀ ಸಾಹು ಶಾಂತಿ ಪ್ರಸಾದ್ ಜೈನ್ ಅವರ ತಾಯಿ `ಮೂರ್ತಿ ದೇವಿ'ಯವರ ಹೆಸರಿನಲ್ಲಿ ಮೂರ್ತಿದೇವಿ ಗ್ರಂಥಮಾಲೆ ಪ್ರಾದುರ್ಭವಾಯಿತು. ಇದು ತತ್ತ್ವಜ್ಞಾನ ಮತ್ತು ಸಿದ್ಧಾಂತ, ಜೈನ ನ್ಯಾಯ ಮತ್ತು ಕರ್ಮ, ಆಚಾರ ಶಾಸ್ತ್ರ ಪೂಜೆ ಮತ್ತು ವ್ರತ ವಿಧಾನ, ವ್ಯಾಕರಣ, ಛಂದಸ್ಸು, ಅಲಂಕಾರ, ಜ್ಯೋತಿಷ್ಯ, ಹಸ್ತ ಸಾಮುದ್ರಿಕೆ ಇವೇ ಮೊದಲಾದ ವಿಷಯಗಳಲ್ಲಿ ಅಪೂರ್ವವಾದ ಕೃತಿಗಳನ್ನು ಪ್ರಕಟಿಸಿದೆ. ಇಲ್ಲಿಯವರೆಗೆ 108 ಗ್ರಂಥಗಳನ್ನು ಪ್ರಕಟಿಸಿದ್ದು ಇವು ಸಂಸ್ಕೃತ - ಪ್ರಾಕೃತ, ಪಾಲಿ, ಅಪಭ್ರಂಶ, ಹಿಂದಿ, ಕನ್ನಡ, ತಮಿಳು, ಇಂಗ್ಲೀಷ್ ಮೊದಲಾದ ಭಾಷೆಗಳಲ್ಲಿವೆ. ಕನ್ನಡ ಭಾಷೆಗೆ ಸಂಬಂಧ ಪಟ್ಟಂತೆ ಡಾ| ಎ. ನಾ. ಉಪಾಧ್ಯೆಯವರ ಮಾರ್ಗ ದರ್ಶನದಲ್ಲಿ ಗ್ರಂಥ ಪ್ರಕಟಣೆಗೆ ಯೋಜನೆ ಹಾಕಿ ಕೊಂಡಿತ್ತು.

**ಭಾರತೀಯ ಜ್ಞಾನಪೀಠ ಪ್ರಶಸ್ತಿಯ ಮೂಲ ಉದ್ದೇಶಗಳು ಹೀಗಿವೆ:-**

(1) ಆಧುನಿಕವಾದ ಸಮಕಾಲೀನ ಭಾರತೀಯ ಭಾಷಾ ಸಾಹಿತ್ಯದಲ್ಲಿದ್ದ ಪ್ರತಿಭಾ ಸಂಪತ್ತುಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು.

(2) ನೂತನ ರಚನೆಯನ್ನು ಗೌರವಿಸುವ ಯೋಜನೆ. ಕೃತಿ ಪ್ರಕಟನೆಯ ಮೂಲಕ ಜನತೆಯಲ್ಲಿ ಓದುವ ಆಸಕ್ತಿಯನ್ನು ಹೆಚ್ಚಿಸುವುದು. ತನ್ಮೂಲಕ ಸಾಹಿತ್ಯ ಸಂಪತ್ತುಗಳನ್ನು ವೃದ್ಧಿಪಡಿಸುವುದು.

(3) ಪ್ರಾಚೀನ ಮತ್ತು ಆಧುನಿಕ ಕೃತಿಗಳನ್ನು ವೈಜ್ಞಾನಿಕವಾಗಿ ಸಂಶೋಧಿಸಿ ಪ್ರಕಟಿಸುವುದು.

(4) ಲೇಖಕ ಮತ್ತು ಸಂಪಾದಕರ ನಡುವೆ ಸೌಹಾರ್ದ ಮನೋಭಾವವನ್ನು ಬೆಳೆಸುವುದು.

ಭಾರತೀಯ ಜ್ಞಾನಪೀಠ ಸಾಹಿತ್ಯ ಪ್ರಶಸ್ತಿಗೆ ಕೃತಿಗಳು ಭಾರತ ಸಂವಿಧಾನಗಳಲ್ಲಿ ನಿರೂಪಿತವಾಗಿರುವ ಭಾರತೀಯ ಭಾಷೆಗಳಲ್ಲಿದ್ದು, ಸಮಿತಿಯು ಗೊತ್ತುಪಡಿಸಿದ ನಿರ್ದಿಷ್ಟ ಅವಧಿಯಲ್ಲಿ ಪ್ರಕಟಗೊಂಡಿರಬೇಕು. ಸರ್ವೋತ್ಕೃಷ್ಟ ಸೃಜನಾತ್ಮಕ ಕೃತಿಯೆಂದು ಸಮಿತಿಯು ಪರಿಗಣಿಸುವ ಗ್ರಂಥವೊಂದಕ್ಕೆ ಪ್ರತಿ ವರ್ಷವೂ ಸಲ್ಲುವ ಶ್ರೇಷ್ಠ ಪಾರಿತೋಷಕ, ನಗದು ಬಹುಮಾನ ಹಾಗೂ ಸಾಂಕೇತಿಕವಾಗಿ ಒಂದು ಕಂಚಿನ ವಾಗ್ದೇವಿಯ ಪ್ರತಿಮೆಯನ್ನು ನೀಡಿ ಗೌರವಿಸಲಾಗುತ್ತದೆ.

`ಭಾರತೀಯ ಜ್ಞಾನಪೀಠ ಪ್ರಶಸ್ತಿ' ಸಮಿತಿ ಪರಿಗಣಿಸಿದ ಭಾರತೀಯ ಭಾಷೆಗಳು: (1) ಕನ್ನಡ (2) ತೆಲುಗು (3) ತಮಿಳು (4) ಮಲೆಯಾಳಂ (5) ಮರಾಠಿ (6) ಗುಜರಾಥಿ (7) ಹಿಂದಿ (8) ಪಂಜಾಬಿ (9) ಕಾಶ್ಮೀರಿ (10) ಸಿಂಧಿ (11) ಒರಿಯಾ (12) ಅಸ್ಸಾಮಿ (13) ಬಂಗಾಳಿ (14) ಸಂಸ್ಕೃತ ಮತ್ತು (15) ಉರ್ದು.

ಈ ಪ್ರಶಸ್ತಿ ಪ್ರಧಾನದ ಕೆಲವು ನಿಯಮಗಳು ಹೀಗಿವೆ:-

(1) ಪ್ರಶಸ್ತಿ ಪಡೆಯುವ ವ್ಯಕ್ತಿ ಭಾರತೀಯ ಪ್ರಜೆಯಾಗಿರಬೇಕು.

(2) ಪ್ರಶಸ್ತಿಗೆಂದು ಪ್ರಾಂತೀಯ ಸಲಹಾ ಸಮಿತಿ ಸೂಚಿಸುವ ಅವಧಿಯ ವೇಳೆಯಲ್ಲಿ ಲೇಖಕ/ಲೇಖಕಿ ಜೀವಂತವಾಗಿರಬೇಕು.

(3) ಸೃಜನಾತ್ಮಕ ಕೃತಿಯ ಪ್ರಕಟಣೆಯಾಗಿರಬೇಕು. ಇಲ್ಲವೆ ಗೊತ್ತುಪಡಿಸಿದ ಕಾಲಾವಧಿಯಲ್ಲಿ ಕಡೆಯ ಪಕ್ಷ ಲೇಖಕ ಅರವತ್ತರಷ್ಟಾದರೂ ಪ್ರಕಟವಾಗಿರಬೇಕು.

(4) ನಿಯಮಿತ ಅವಧಿಯಲ್ಲಿ ಪ್ರಕಟವಾದ ಪ್ರಸಿದ್ಧ ಬರಹಗಾರರ ಯಾವುದಾದರೊಂದು ಕೃತಿಯನ್ನು ಗುರುತಿಸಿ ಪ್ರಶಸ್ತಿ ಕೊಡುವುದು, ಅನಿವಾರ್ಯವೆನಿಸಿದರೆ ಮಾತ್ರ ಒಂದು ವರ್ಷದ ಪ್ರಶಸ್ತಿಯನ್ನು ಎರಡು ಭಾಷಾ ಕೃತಿಗಳಿಗೆ ಸಮವಾಗಿ ಹಂಚಿ ಕೊಡಲಾಗುವುದು.

(5) ಗೊತ್ತುಪಡಿಸಿದ ಅವಧಿಯಲ್ಲಿ ಯಾವುದೇ ಭಾಷೆಯಲ್ಲಿ ಪ್ರಶಸ್ತಿಗೆ ಅರ್ಹ ಕೃತಿಗಳಿಲ್ಲದಿದ್ದರೆ ಆ ವರ್ಷದ ಪ್ರಶಸ್ತಿಯನ್ನು ತಡೆಹಿಡಿಯುವ ಹಕ್ಕು ಸಮಿತಿಗಿದೆ.

(6) ಒಂದು ಭಾಷಾ ಕೃತಿ ಪ್ರಶಸ್ತಿ ಪಡೆದ ಮೇಲೆ ಮುಂದಿನ ಮೂರು ವರ್ಷಗಳ ಕಾಲ ಮತ್ತೆ ಆ ಭಾಷೆಯಲ್ಲಿ ಬೇರೆ ಕೃತಿಗಳನ್ನು ಪ್ರಶಸ್ತಿಗಾಗಿ ಆಯ್ಕೆ ಮಾಡುವಂತಿಲ್ಲ.

(7) ಒಬ್ಬರು ಒಮ್ಮೆ ಪ್ರಶಸ್ತಿ ಪಡೆದ ಮೇಲೆ ಮತ್ತೆ ಪಡೆಯುವಂತಿಲ್ಲ.

ಕೇಂದ್ರ ಸಮಿತಿಯಲ್ಲಿ ಹನ್ನೊಂದು ಜನ ಸದಸ್ಯರಿರುತ್ತಾರೆ. ಸಾಹಿತ್ಯ ಕ್ಷೇತ್ರದಲ್ಲಿ ದುಡಿದು ಪರಿಣತಿ ಪಡೆದ ಈ ಹನ್ನೊಂದು ಸದಸ್ಯರುಗಳ ಸಮಿತಿಯು ಕೃತಿಮೌಲ್ಯವನ್ನು ಮಾಡುತ್ತದೆ. ಇದಕ್ಕೆ ಮುನ್ನ ಪ್ರಾಂತೀಯ ಸಮಿತಿ ಆಯಾ ಪ್ರದೇಶದ ಲೇಖಕರ, ವಿದ್ವಾಂಸರ ಹಾಗೂ ಸಾರ್ವಜನಿಕರ ಅಭಿಪ್ರಾಯ ಪಡೆದು ಕೇಂದ್ರ ಸಮಿತಿಗೆ ಸಂಬಂಧಪಟ್ಟ ಭಾಷೆಯ ಕೃತಿಗಳನ್ನು ಅರ್ಪಿಸಲಾಗುತ್ತದೆ. ಹಿಂದಿ ಅಥವಾ ಇಂಗ್ಲೀಷ್ ಅನುಕೃತಿಯನ್ನು ಪ್ರತಿಯೊಬ್ಬ ಕೇಂದ್ರ ಸಮಿತಿ ಸದಸ್ಯರಿಗೂ ಒದಗಿಸಲಾಗುತ್ತದೆ. ದೀರ್ಘವಾದ ಚರ್ಚೆಯ ನಂತರ ಸಮಿತಿ ತನ್ನ ನಿರ್ಣಯವನ್ನು ತಿಳಿಸುತ್ತದೆ. ಅಂತಿಮ ತೀರ್ಮಾನ ಸಮಿತಿಯದೇ. ಅಧ್ಯಕ್ಷರನ್ನು ಒಳಗೊಂಡ ಕೇಂದ್ರ ಸಮಿತಿಗೆ ಡಾ| ಬಾಬು ರಾಜೇಂದ್ರ ಪ್ರಸಾದರು ಮೊತ್ತ ಮೊದಲ ಅಧ್ಯಕ್ಷರಾಗಿದ್ದರು. ಅನಂತರ ಡಾ| ವಿನಾಯಕ ಕೃಷ್ಣ ಗೋಕಾಕರು ಅಧ್ಯಕ್ಷರಾಗಿದ್ದರು.

ಜ್ಞಾನಪೀಠದ ಅಧ್ಯಕ್ಷೆ ಶ್ರೀಮತಿ ರಮಾ ಜೈನ್ 1961ರ ನವೆಂಬರ್ 22ರಂದು ``ಭಾರತೀಯ ಭಾಷೆಗಳಲ್ಲಿ ಪ್ರಕಟಗೊಂಡ ಪುಸ್ತಕಗಳಲ್ಲಿ ಒಳ್ಳೆಯ ಪುಸ್ತಕವನ್ನು ದೊಡ್ಡ ಬಹುಮಾನಕ್ಕಾಗಿ ಆರಿಸಲು ಸಾಧ್ಯವೇ?" ಎಂದು ತಮ್ಮ ಮನೆಗೆ ಕರೆದಿದ್ದ ಹೆಸರಾದ ಸಾಹಿತಿಗಳಾದ ಕಾಕಾ ಕಾಲೇಲಕರ್, ಹರಿವಂಶರಾಯ್‌ಬಚ್ಚನ್ ಮುಂತಾದವರನ್ನು ಕೇಳಿದರು. ಸಾಹಿತಿಗಳು ಎರಡು ದಿನಗಳ ಚರ್ಚೆಯ ನಂತರ ತಮ್ಮ ಅಭಿಪ್ರಾಯವನ್ನು ಡಾ| ರಾಜೇಂದ್ರ ಪ್ರಸಾದರ ಮುಂದೆ ಇರಿಸಿದಾಗ ಅದನ್ನು ಒಪ್ಪಿದ ಅವರು ಯೋಜನೆಯನ್ನು ಜಾರಿಗೆ ತರುವಲ್ಲಿ ತಮ್ಮಿಂದಾಗುವ ಸಹಾಯವನ್ನು ಮಾಡುವ ವಚನವಿತ್ತರು.

ಈ ವಿಚಾರವನ್ನು ಭಾಷಾ ಲೇಖಕರ ಜೊತೆಗೆ ಚರ್ಚಿಸಲಾಯಿತು. ಡಾ। ರಾಜೇಂದ್ರ ಪ್ರಸಾದರನ್ನೇ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ದುರದೃಷ್ಟವಶಾತ್ ರಾಜೇಂದ್ರ ಪ್ರಸಾದರು ನಿಧನರಾಗಲು ಕಾಕಾ ಕಾಲೇಲಕರ್ ಅಧ್ಯಕ್ಷತೆ ವಹಿಸಿದರು. ತರುವಾಯ ಡಾ। ಸಂಪೂರ್ಣಾನಂದರು ಅದರ ಮುಖಂಡರಾದರು.

ಇವೆಲ್ಲಾ ಭಾಷೆಗಳ ನಡುವೆ ಲೇಖಕ ಅಥವಾ ಕೃತಿಯನ್ನು ಪ್ರಶಸ್ತಿಗಾಗಿ ಆರಿಸುವುದು ಬಹಳ ಪರಿಶ್ರಮದಿಂದ ಕೂಡಿದ ಕೆಲಸವಾಗಿದೆ. ಇಂತಹ ಸವಾಲನ್ನು ಕೂಡಾ ಈ ವಿದ್ವಾಂಸರ ಅನುಭವದಲ್ಲಿ ಅತ್ಯುತ್ತಮವಾಗಿ ನಿರ್ವಹಿಸಲಾಗಿದೆ. ಸಹೃದಯರ, ವಿಮರ್ಶಕರ, ಸಾಹಿತ್ಯಿಕ ಸಂಸ್ಥೆಗಳ ವಿಶ್ವ ಈ ಎಲ್ಲ ಭಾರತೀಯ ಭಾಷೆಗಳಲ್ಲಿಯೇ ಹೆಚ್ಚು ಜ್ಞಾನಪೀಠ ಗಳಿಸಿರುವ ಏಕೈಕ ಭಾಷೆ ಕನ್ನಡ. ಆರು ಬಾರಿ ಜ್ಞಾನಪೀಠವನ್ನೇರುವ ಕನ್ನಡ ಭಾಷೆ ಬಹಳಷ್ಟು ಬಾರಿ ವಿದ್ಯಾಲಯಗಳಲ್ಲಿನ ಭಾಷಾ ವಿಭಾಗಗಳ ಸಲಹೆಯಿಂದ ಆಯ್ಕೆ ಮಾಡುವುದು ಮೊದಲ ಹಂತವಾದರೆ, ಪ್ರಾಂತೀಯ ಭಾಷಾ ಸಮಿತಿಗಾರರು ಇದನ್ನು ಪರಿಶೀಲಿಸುವುದು ಎರಡನೆಯ ಹಂತ. ಪ್ರತಿ ಭಾಷೆಗಳ ಮೂವರು ಸಾಹಿತ್ಯ ವಿಮರ್ಶಕರ ಹಾಗೂ ವಿದ್ವಾಂಸರನ್ನೊಳಗೊಂಡ ಸಮಿತಿ ಇರುತ್ತದೆ. ಮತ್ತು ಮೂರು ವರ್ಷಗಳಿಗೊಮ್ಮೆ ಇದನ್ನು ಪುನರಾಯ್ಕೆ ಮಾಡಲಾಗುತ್ತದೆ. ಲೇಖಕರ ಪ್ರಶಸ್ತ್ಯಾರ್ಹ ಕೃತಿಯ ಐದು ಮತ್ತು ಹದಿನೈದು ವರ್ಷಗಳಲ್ಲಿ ಪ್ರಕಟವಾದ ಕೃತಿಗಳನ್ನು ಪರಿಶೀಲಿಸಲಾಗುತ್ತದೆ. ಪ್ರಾಂತೀಯ ವಿವಿಧ ಭಾಷಾ ಸಲಹಾ ಸಮಿತಿಗಳ ಸಲಹೆ, ಆಯ್ಕೆ ಸಮಿತಿಯ ಮುಂದೆ ಇಡಲಾಗುತ್ತದೆ. ಈ ಆಯ್ಕೆಯ ಸಮಿತಿಯು 7 ರಿಂದ 11 ಸಂಖ್ಯೆಯ ಉನ್ನತ ಮಟ್ಟದ ವಿದ್ವಾಂಸರ ಸಮಿತಿಯಾಗಿದೆ. ಈ ಸಮಿತಿ ಭಾಷಾ ಸಮಿತಿಗಳ ಸಲಹೆಯನ್ನು ಕೌಲಂಕಷವಾಗಿ ಮೌಲ್ಯ ಮಾಪನ ಮಾಡುತ್ತದೆ. ಬಹಳಷ್ಟು ದೀರ್ಘ ಮತ್ತು ಆಳವಾದ ಚರ್ಚೆಯ ನಂತರ ನಿರ್ಣಯವನ್ನು ಕೈಗೊಳ್ಳಲಾಗುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ ಭಾರತೀಯ ಭಾಷಾ ಸಾಹಿತ್ಯಗಳ ನಡುವೆ ಇರುವ ವೈವಿಧ್ಯತೆಯಲ್ಲಿನ ಏಕತೆ ಕಾರಣ. ಭಾರತೀಯ ಸಾಹಿತ್ಯವು ಬರಿಯ ಪರಂಪರೆಯನ್ನು ವ್ಯಕ್ತಗೊಳಿಸುವ ವಾಹಕವಾಗಿ ಮಾತ್ರವಲ್ಲದೆ ಪ್ರತಿಭಟನೆಯ ಧ್ವನಿಯನ್ನು ದಾಖಲಿಸುತ್ತ ಬಂದಿದೆ. ಈ ಬಗೆಯ ನಿಷ್ಪಕ್ಷಪಾತ ಹಾಗೂ ಉನ್ನತ ಮೌಲ್ಯ ನಿಷ್ಠೆಯಿಂದ ಈ ಪ್ರಶಸ್ತಿ ಭಾರತೀಯ ಸಾಹಿತ್ಯದಲ್ಲಿ, ಅದರ 15 ಭಾಷೆಗಳಲ್ಲಿ ಮಹತ್ವವನ್ನು ಪಡೆದಿದೆ.

1965ರಿಂದ ಪ್ರಾರಂಭವಾಗಿ ಇಲ್ಲಿಯವರೆಗೆ 33 ಲೇಖಕರು ಪ್ರಶಸ್ತಿಯನ್ನು ಗಳಿಸಿದ್ದಾರೆ. ಈ ಮೂರು ದಶಕಗಳಲ್ಲಿ ಎರಡು ಸಂದರ್ಭದಲ್ಲಿ ಮಾತ್ರ ಇಬ್ಬರು ಲೇಖಕರು ಪ್ರಶಸ್ತಿಯನ್ನು ಹಂಚಿ ಕೊಂಡಿದ್ದಾರೆ. 1983ರಲ್ಲಿ ಪ್ರಶಸ್ತಿ ಪಡೆದ ಮಾಸ್ತಿಯವರಿಂದ ಮುಂದಕ್ಕೆ ಪ್ರತ್ಯೇಕ ಭಾಷಾ ಸಾಹಿತ್ಯಕ್ಕೆ ಲೇಖಕರ ಅನುಪಮ ಕೊಡುಗೆಗಾಗಿ ಪ್ರಶಸ್ತಿ ಕೊಡಲಾಗಿದೆ. ಹೀಗೆ ಪ್ರಶಸ್ತಿಯನ್ನು ಪಡೆದ ಕೃತಿಗಾರರ ಮತ್ತು ಕೃತಿಗಳ ಹೆಸರುಗಳನ್ನು ಪ್ರಶಸ್ತಿ ಪಡೆದ ಇಸವಿಗಳ ಸಮೇತ ಪಟ್ಟಿಯಲ್ಲಿ ಕೊಡಲಾಗಿದೆ.

ಈ ಎಲ್ಲಾ ಭಾರತೀಯ ಭಾಷೆಗಳಲ್ಲಿಯೇ ಹೆಚ್ಚು ಜ್ಞಾನಪೀಠಗಳಿಸಿರುವ ಏಕೈಕ ಭಾಷೆ ಕನ್ನಡ. ಅದು ಆರು ಬಾರಿ ಮತ್ತೆ ಜ್ಞಾನಪೀಠವನ್ನೇರುವ ಕನ್ನಡ ಭಾಷೆ ಬಹಳಷ್ಟು ಬಾರಿ ಮತ್ತೆ ಜ್ಞಾನಪೀಠ ಏರುವ ಸಾಮರ್ಥ್ಯ ಹೊಂದಿದೆ. ಕನ್ನಡ ಭಾಷೆಯ ಸಾಹಿತ್ಯದ ಹಿರಿಮೆ ಗರಿಮೆಗಳು ಮುಂದೆಯೂ ಮಹತ್ವಪೂರ್ಣ ಕೊಡುಗೆಗಳನ್ನು ಭಾರತೀಯ ಸಾಹಿತ್ಯಕ್ಕೆ ಕೊಡಲಿ ಎಂದು ಹಾರೈಸೋಣ.

## ಭಾರತೀಯ ಜ್ಞಾನಪೀಠ ಪ್ರಶಸ್ತಿ ವಿಜೇತರು

(ಭಾಷಾವಾರು)

| | | ಕೃತಿಯ ಹೆಸರು | ಇಸವಿ |
|---|---|---|---|
| | **ಕನ್ನಡ** | | |
| (1) | ಕೆ. ವಿ. ಪುಟ್ಟಪ್ಪ | ರಾಮಾಯಣ ದರ್ಶನ | 1967 |
| (2) | ದ. ರಾ. ಬೇಂದ್ರೆ | ನಾಕು ತಂತಿ | 1973 |
| (3) | ಕೆ. ಶಿವರಾಮ ಕಾರಂತ | ಮೂಕಜ್ಜಿಯ ಕನಸುಗಳು | 1977 |
| (4) | ಮಾಸ್ತಿ ವೆಂಕಟೇಶ ಐಯ್ಯಂಗಾರ್ | ಚಿಕವೀರ ರಾಜೇಂದ್ರ | 1983 |
| (5) | ವಿ. ಕೃ. ಗೋಕಾಕ್ | ಭಾರತ ಸಿಂಧುರಶ್ಮಿ | 1990 |
| (6) | ಯು. ಆರ್. ಅನಂತಮೂರ್ತಿ | ಅನುಪಮ ಕೊಡುಗೆಗಾಗಿ | 1994 |
| | **ಹಿಂದಿ** | | |
| (1) | ಸುಮಿತ್ರಾ ನಂದನ್ ಪಂತ್ | ಚಿದಂಬರಂ | 1968 |
| (2) | ರಾಮಧಾರಿ ಸಿಂಗ್ ದಿನಕರ್ | ಊರ್ವಶಿ | 1972 |
| (3) | ನರೇಶ್ ಮೆಹ್ತಾ | ಅನುಪಮ ಕೊಡುಗೆಗಾಗಿ | 1992 |
| (4) | ಎಸ್. ಎಚ್ ವಾತ್ಸ್ಯಾಯನ್ | ಕಿತನಿ ನಾವೋಮೆ ಕಿತನಿ ಬಾರ್ | 1978 |
| (5) | ಮಹಾದೇವಿ ವರ್ಮ | ಯಮ | 1982 |
| | **ಬೆಂಗಾಲಿ** | | |
| (1) | ತಾರಾ ಶಂಕರ ಬ್ಯಾನರ್ಜಿ | ಗಾನದೇವತಾ | 1966 |
| (2) | ಬಿಷ್ಣು ದೇ | ಸ್ಮೃತಿ ಸತ್ತಾ ಭವಿಷ್ಯತ್ | 1971 |
| (3) | ಆಶಾಪೂರ್ಣ ದೇವಿ | ಪ್ರಥಮ ಪ್ರತ್ಯಾಶಿ | 1976 |
| (4) | ಸುಭಾಷ್ ಮುಖ್ಯೋಪಾಧ್ಯಾಯ | ಅನುಪಮ ಕೊಡುಗೆಗಾಗಿ | 1991 |
| | **ಮಲಯಾಳಂ** | | |
| (1) | ಶಂಕರ ಕುರುಪ್ | ಓಡಕ್ಕುಗಲ್ | 1965 |
| (2) | ಎಸ್. ಕೆ. ಪೊಟ್ಟೆಕ್ಕಟ್ | ಓರು ದೇಶತಿಂದೆ ಕಥಾ | 1980 |
| (3) | ಟಿ. ಶಿವಶಂಕರ ಪಿಳ್ಳೆ | ಕೈಯಾರ್ | 1984 |
| (4) | ಎಂ. ಟಿ. ವಾಸುದೇವ ನಾಯರ್ | ಅನುಪಮ ಕೊಡುಗೆಗಾಗಿ | 1995 |
| | **ಒರಿಯ** | | |
| (1) | ಗೋಪಿನಾಥ್ ಮೊಹಂತಿ | ಮೋತಿ ಮಹಲ್ | 1973 |
| (2) | ಸಚ್ಚಿದಾನಂದ ರಾವುತ್ ರಾಯ್ | ಕವಿತ | 1986 |
| (3) | ಮಹಾಪಾತ್ರ ಸೀತಾಕಾಂತ | ಜಾನಪದ | 1993 |
| | **ಗುಜರಾತಿ** | | |
| (1) | ಉಮಾ ಶಂಕರ ಜೋಷಿ | ನಿಶಿತ್ | 1967 |
| (2) | ಪನ್ನಾಲಾಲ್ ಪಟೇಲ್ | ಮಾನವಿನಿ ಭಾವೈ | 1985 |
| | **ಉರ್ದು** | | |
| (1) | ರಘುಪತಿ ಸಾಹೆ (ಫಿರಾಕ್) | ಗುಲೇ ನಗ್‌ಮಾ | 1969 |
| (2) | ಕುರ್‍ರಾತುಲೆಯಿನ್ ಹೈದರ್ | ಆಗ್ ಕಿ ಧರಿಯಾ<br>ಪತ್ತರ್ ಕಿ ಆವಾಜ್ | 1989 |
| | **ತೆಲುಗು** | | |
| (1) | ವಿಶ್ವನಾಥ ಸತ್ಯನಾರಾಯಣ | ರಾಮಾಯಣ ಕಲ್ಪವೃಕ್ಷಮು | 1970 |
| (2) | ಸಿ. ನಾರಾಯಣ ರೆಡ್ಡಿ | ಸಮಗ್ರ ರಾವ್ಯಕ್ಕೆ | 1988 |
| | **ಮರಾಠಿ** | | |
| (1) | ವಿ. ಎಸ್. ಖಾಂಡೇಕರ್ | ಯಯಾತಿ | 1974 |
| (2) | ವಿ. ವಿ. ಶಿರವಾಡಕರ್ | ಸಮಗ್ರ ಕಾವ್ಯಕ್ಕೆ | 1987 |
| | **ತಮಿಳು** | | |
| (1) | ಎ. ವಿ. ಅಖಿಲಾಂದಮ್ | ಚಿತ್ತಿರಪ್ಪಾ ವೈ | 1975 |
| | **ಅಸ್ಸಾಮಿ** | | |
| (1) | ವಿರೇಂದ್ರ ಕುಮಾರ್ ಭಟ್ಟಾಚಾರ್ಯ | ಮೃತ್ಯುಂಜಯ | 1975 |
| | **ಪಂಜಾಬಿ** | | |
| (1) | ಅಮೃತಾ ಪ್ರೀತಮ್ | ಕಾಗಜ್ ತೆ ಕನ್‌ವಾದ್ | 1981 |

ಸಂದರ್ಶನ

# ಶ್ರೇಷ್ಠ ಅಧ್ಯಾಪಕಿ ಜಮುನಾ ಉಚ್ಚಿಲರೊಂದಿಗೆ ಸಂದರ್ಶನ

● ರೇಖಾ

ಅಸೋಸಿಯೇಷನ್ನಿನ ಸಮೀಪದಲ್ಲಿರುವ ಮಹಿಳಾಶ್ರಮ ರಸ್ತೆಯಲ್ಲಿನ ಮಾತುಂಗ-ಕಿಂಗ್ ಸರ್ಕಲ್ ಬಾಂಬೆ ಮುನಿಸಿಪಲ್ ಕನ್ನಡ ಶಾಲೆಯ ಬಗ್ಗೆ ಆಸಕ್ತಿ ಮೂಡಿದ್ದು ಅಲ್ಲಿಯ ಮುಖ್ಯೋಪಾಧ್ಯಾಯಿನಿ ಜಮುನಾ ಉಚ್ಚಿಲರಿಂದಾಗಿ. ಜಾಗದಿಂದ ವ್ಯಕ್ತಿಗಳಿಗೆ ಮಹತ್ವ ಬಂದರೆ ಕೆಲವೊಮ್ಮೆ ವ್ಯಕ್ತಿಗಳಿಂದಾಗಿ ಜಾಗಕ್ಕೆ ಮಹತ್ವ ಬರುತ್ತದೆ. ಜಮುನಾ ಉಚ್ಚಿಲರ ಬಗ್ಗೆ ಸ್ನೇಹಿತರಿಂದ ಕೇಳರದಿದ್ದರೆ ಆ ಶಾಲೆ ನನ್ನನ್ನು ಸೆಳೆಯುತ್ತಿರಲಿಲ್ಲ. ಫೋನಿನಲ್ಲಿ ಸಂಪರ್ಕಿಸಿದ ಜಮುನಾರಿಗೆ ಅವರನ್ನು ಅವರ ಮನೆಯ ಪರಿಸರದಲ್ಲಿ, ಗೃಹಿಣಿಯಾಗಿ ಸಂದರ್ಶಿಸುವುದಕ್ಕಿಂತ ಶಾಲೆಯ ಮಕ್ಕಳ ಗದ್ದಲದ ಹಿನ್ನೆಲೆಯಲ್ಲಿ ಸಂದರ್ಶಿಸುವುದಾಗಿ ಹೇಳಿ ಶಾಲೆಗೆ ಹೋದೆ.

ಶಿಥಿಲವಾಗಿ ಕಾಣುವ ಹಳೆ ಕಟ್ಟಡದಲ್ಲಿ ಕನ್ನಡ ಶಾಲೆ ಎರಡನೆಯ ಮಹಡಿಯಲ್ಲಿದೆ. ತಮಿಳು, ಮರಾಠಿ ಶಾಲೆಗಳೂ ಇದೇ ಕಟ್ಟಡದಲ್ಲಿದ್ದು ಕನ್ನಡ ಶಾಲೆಗಿಂತ ಹೆಚ್ಚು ಮಕ್ಕಳು ಅಲ್ಲಿ ಓದುತ್ತಿದ್ದಾರೆ. ಎರಡನೆ ಮಹಡಿಗೆ ಹೋದಂತೆ ಗೋಡೆಗೆ ಅಂಟಿಸಿದ ಬಣ್ಣದ ಚಿತ್ರಗಳು, ದಿನಪತ್ರಿಕೆಯ ಸುದ್ದಿಗಳ ತಲೆ ಬರಹ, ಸ್ಪರ್ಧೆಯಲ್ಲಿ ವಿಜೇತರಾಗಿದ್ದ ಮಕ್ಕಳಿಗೆ ಅವರಿಗೆ ತರಬೇತಿ ಕೊಟ್ಟ ಅಧ್ಯಾಪಕರಿಗೆ ಅಭಿನಂದನಾ ಸಂದೇಶ, ಚಿಂತನೆ ಇತ್ಯಾದಿ ಬರೆದಿದ್ದ ಕಪ್ಪು ಹಲಗೆಗಳು ಕಂಡು ಬಂದಿತು. `ನೇಸರು' ಪರವಾಗಿ ಅವರೊಂದಿಗೆ ಆಡಿದ ಕೆಲವು ಮಾತುಕತೆಯ ಭಾಗಗಳು:

**ನೀವು ಮುಂಬೈಗೆ ಬಂದದ್ದು - ಕೆಲಸಕ್ಕೆ ಸೇರಿದ್ದು ಯಾವಾಗ?**

ಮಂಗಳೂರಿನ ಆನಂದಾಶ್ರಮ ಹೈ ಸ್ಕೂಲಿನಲ್ಲಿ S.S.C. ಮುಗಿಸಿ 1960ರಲ್ಲಿ ಟೀಚರ್ಸ್ ಟ್ರೇನಿಂಗ್ ಸ್ಕೂಲಿನಲ್ಲಿ ತರಬೇತಿ ಪಡೆದೆ. 1961ರಲ್ಲಿ ಮುಂಬೈನಲ್ಲಿನ ಮಾತುಂಗ-ಕಿಂಗ್ ಸರ್ಕಲ್ ಮುನಿಸಿಪಲ್ ಶಾಲೆಯಲ್ಲಿ ಅಧ್ಯಾಪಕಿಯಾಗಿ ಕೆಲಸಕ್ಕೆ ಸೇರಿದೆ. ಕೆಲಸಕ್ಕೆ ಸೇರಿದ ಸ್ಕೂಲಿಗೆ 30 ವರ್ಷಗಳ ನಂತರ ಮುಖ್ಯೋಪಾಧ್ಯಾಯಿನಿಯಾಗಿ ಮತ್ತೆ ಬಂದಿದ್ದೇನೆ.

**ನಿಮ್ಮ ಶಾಲೆಯಲ್ಲಿ ಎಷ್ಟು ಮಕ್ಕಳಿದ್ದಾರೆ? ಎಷ್ಟು ಶಿಕ್ಷಕ-ಶಿಕ್ಷಕಿಯರಿದ್ದಾರೆ?**

ಒಂದರಿಂದ ಏಳನೆಯ ತರಗತಿಯವರೆಗೆ ಇರುವ ಈ ಶಾಲೆಯಲ್ಲಿ 209 ಮಕ್ಕಳಿದ್ದಾರೆ. ಏಳು ಜನ ಶಿಕ್ಷಕ-ಶಿಕ್ಷಕಿಯರಿದ್ದಾರೆ. ಹೆಚ್ಚಿನಂಶ ಧಾರಾವಿಯ ಗುಡಿಸಲು ಪ್ರದೇಶದಿಂದ ಬರುವ ಮಕ್ಕಳು. ತಂದೆ-ತಾಯಿ ಓದಿರುವುದಿಲ್ಲ, ಬಡತನ ಬೇರೆ. ಶಾಲೆಗೆ



**ಶ್ರೀಮತಿ ಜಮುನಾ ಉಚ್ಚಿಲರು ಮೇಯರ್ ಪ್ರಶಸ್ತಿ ಮತ್ತು ರಾಜ್ಯ ಪ್ರಶಸ್ತಿ ಪಡೆದ ಅಧ್ಯಾಪಕಿ. "ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು" ಎಂದು ಹೇಳುತ್ತಾ ಈಕೆ ಧರಾವಿಯ ಬಡಮಕ್ಕಳ ಮುಖದಲ್ಲಿ ನಗೆ ಮಿಂಚಿಸುವುದಲ್ಲೇ ಅಲ್ಲ ಅವರ ವ್ಯಕ್ತಿತ್ವಕ್ಕೆ ಭದ್ರ ಬುನಾದಿ ಹಾಕಿ ಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ.**

ಬಂದರೆ ಬಂದ್ರು ಇಲ್ಲಿದ್ರೆ ಇಲ್ಲ. ಎಷ್ಟೋ ಬಾರಿ ಅಧ್ಯಾಪಕ ವರ್ಗದವರು ಮನೆಗಳಿಗೆ ಹೋಗಿ ಮಕ್ಕಳನ್ನು ಶಾಲೆಗೆ ಬರುವಂತೆ ಮನವೊಲಿಸಬೇಕಾಗುತ್ತದೆ.

**ಮಕ್ಕಳು ಎಷ್ಟೇ ಒಳ್ಳೆಯ ಶಾಲೆಗೆ ಹೋದ್ರು Tution ಅನಿವಾರ್ಯ ಆಗಿರೊ ಇಂದಿನ ಸಂದರ್ಭದಲ್ಲಿ ನಿಮ್ಮ ಶಾಲೆಯ ಮಕ್ಕಳು ಹೇಗೆ Cope ಮಾಡ್ತಾರೆ?**

ಸ್ಕೂಲಿಗೆ ಬರುವ ಆಸಕ್ತಿ ಮಕ್ಕಳಿಗಿಲ್ಲ. ತಂದೆ-ತಾಯಿಗಳಿಗೆ ಮಕ್ಕಳನ್ನು ಓದಿಸ ಬೇಕೆಂಬ ಆಸೆಯೂ ಇಲ್ಲ. ಶಾಲೆಯಲ್ಲಿ ಕಲಿಯುವುದನ್ನು ಬಿಟ್ಟರೆ ಅವರಿಗೆ ಮನೆಯ ಕಡೆಯಿಂದ ಯಾವ ನೆರವೂ ಸಿಗದೆ Home work ಕೂಡಾ ಮಾಡಿರೋದಿಲ್ಲ. ಹಾಗಾಗಿ ಶಾಲೆಯ ಸಮಯದ ನಂತರ ಪ್ರತಿ ವಿದ್ಯಾರ್ಥಿಯಿಂದ ತಲಾ ರೂ. 5/- ಪಡೆದು Study class ನಡೆಸ್ತೀವಿ. ಅದಕ್ಕೆ ಬೇರೆ ಒಬ್ಬ ಉಪಾಧ್ಯಾಯರನ್ನು ಗೊತ್ತು ಮಾಡಿದೆ.

**ನಿಮ್ಮ ಶಾಲೆಯ ಪರೀಕ್ಷಾ ಪದ್ಧತಿ ಹೇಗೆ?**

ಪ್ರತಿ ತಿಂಗಳು Unit Test ಇರತ್ತೆ, ಎರಡು ಪರೀಕ್ಷೆಗಳು. ವರ್ಷಾದ್ಯಂತದ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಮುನಿಸಿಪಾಲಿಟಿಯವರೇ ಎಲ್ಲಾ ಶಾಲೆಗಳಿಗೂ ಸಿದ್ಧಪಡಿಸಿ ಕೊಡ್ತಾರೆ. ಕನ್ನಡ ಪ್ರಶ್ನೆ ಪತ್ರಿಕೆ ಮಾತ್ರ ನಾವು Set ಮಾಡ್ತೀವಿ. ಪರೀಕ್ಷೆಗಳಲ್ಲಿ 65ರಿಂದ 60 ಶೇಕಡ ಗಳಿಸುವವರು ಕಡಿಮೆ. ಸರಾಸರಿ ಬುದ್ಧಿಮಟ್ಟ ಕಡಿಮೆ ಇರೋದ್ರಿಂದ ಹೆಚ್ಚೇನು ಅಪೇಕ್ಷಿಸಲಾಗಲ್ಲ.

**ನಿಮ್ಮ ಶಾಲೆಯ ಇತರ ಚಟುವಟಿಕೆಗಳೇನು?**

ಮಹಾರಾಷ್ಟ್ರ ಸರ್ಕಾರದ ವಿದ್ಯಾರ್ಥಿ ವೇತನದ ಪರೀಕ್ಷೆಗಳಿಗೆ ತರಬೇತಿ ಕೊಟ್ಟು ಕರೆದು ಕೊಂಡು ಹೋಗ್ತೀವಿ. ಅಂತರ ಶಾಲಾ ಆಟಗಳು ಮತ್ತು ಪ್ರತಿಭಾ ಸ್ಪರ್ಧೆಗಳಿಗೆ ಕರೆದುಕೊಂಡು ಹೋಗ್ತೀವಿ. ಅಂತರ ಶಾಲಾ ಆಟದ ಸ್ಪರ್ಧೆಗಳಲ್ಲಿ ಬಹುಮಾನ ಬಂದಿವೆ. ಕನ್ನಡ ಸಂಘ-ಸಂಸ್ಥೆಗಳು ಏರ್ಪಡಿಸುವ ಪ್ರತಿಭಾ ಸ್ಪರ್ಧೆಗಳಲ್ಲಿ ಬಹುಮಾನ ಬಂದಿದೆ. Picnic ಕರೆದುಕೊಂಡು ಹೋಗ್ತೀವಿ.

**ಕನ್ನಡ ಶಾಲೆಗಳ ಭವಿಷ್ಯ ಹೇಗಿದೆ?**

ಹೆಚ್ಚು ಆಶಾದಾಯಕವಾಗಿಲ್ಲ, ಕನ್ನಡ ಶಾಲೆಗಳನ್ನು ಉಳಿಸುವುದೇ ಕಷ್ಟ ಅನ್ನುವ ಮಟ್ಟಿಗಾಗಿ ಬಿಟ್ಟಿದೆ. High School ಹಾಗೂ ಹೀಗೂ ಮಾಡ್ತಾರೆ. College ಮೆಟ್ಟಲು ಹತ್ತೋರು ಬಹಳ ಕಡಿಮೆ. ಕೆಲಸಕ್ಕೆ ಹೋದರೂ ರಾತ್ರಿ ಶಾಲೆಗಳಿಗಾದ್ರೂ ಹೋಗಿ ಓದಿ ಅಂತ ಹೇಳ್ತೀನಿ.

**ನಿಮ್ಮಿಂದ ಪಾಠ ಕಲಿತು ಮುಂದೆ ಬಂದು ಖ್ಯಾತಿ ಪಡೆದ ವಿದ್ಯಾರ್ಥಿಗಳಿದ್ದಾರೆಯೆ?**

ಸಯಾನ್ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದು ಈಗ ತಮ್ಮದೇ Private Practice ಮಾಡ್ತಿರೋ Dr. ಸದಾನಂದ ಶೆಟ್ಟಿ, ತಿಲಕ ನಗರದ ಶಾಲೆಯಲ್ಲಿ ಶಿಷ್ಯ ಆಗಿದ್ದು ಈಗ ಇಲ್ಲಿನ Drawing Teacher ಆಗಿರೋ ದೀಪಕ್ ಪ್ರಭು ಕೂಡಾ ನನ್ನ ಶಿಷ್ಯನೇ.

**ನೀವು ಮುಖ್ಯೋಪಾಧ್ಯಾಯಿನಿಯಾಗಿ ಬಂದ ಮೇಲೆ ಸಾಧಿಸಿದ ಸಾಧನೆಗಳೇನು?**

ಹಿಂದೆ ಹೇಳಿದ Study Classನ ಶುರು ಮಾಡಿದ್ದು ನಾನೇ. ಅದಕ್ಕೆ ಕೊಡಬೇಕಾದ ಕಡಿಮೆ Fees ಕೂಡಾ ಎಷ್ಟೋ ಮಕ್ಕಳು ಕೊಡೋದಿಲ್ಲ. ಎಷ್ಟೋ ಬಾರಿ ನನ್ನ ಕೈಯಿಂದಲೇ ಹಾಕಿದ್ದು ಇದೆ. ಶಾಲೆಯ ಮಕ್ಕಳಿಗೆ ಸಮವಸ್ತ್ರ, ದೂರದಿಂದ ಬರುವ ಮಕ್ಕಳ ಬಸ್ಸಿಗೆ ಹಣ ಮತ್ತಿತರ ವೆಚ್ಚಗಳಿಗಾಗಿ ಸಂಘ ಸಂಸ್ಥೆಗಳಿಗಾಗಿ ಹೋಗಿ ಚಂದಾ ತರುತ್ತೇನೆ. ಬಾಲವಾಡಿಯನ್ನು ಶುರು ಮಾಡಿದ್ದೇನೆ. ಗುಡಿಸಲು ಪ್ರದೇಶಗಳಿಗೆ ನನ್ನ ಸಹಪಾಠಿಗಳೊಂದಿಗೆ ಹೋಗಿ ಸಾಕ್ಷರತೆ, ಕುಡಿತದ ಚಟದಿಂದ ದೇಹಕ್ಕೆ ಹಾಗೂ ಕುಟುಂಬಕ್ಕೆ ಆಗುವ ಹಾನಿಗಳ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ಮಾಡಿದ್ದೇನೆ. ಈ ಪ್ರಯತ್ನದಲ್ಲಿ ನನ್ನ ಸಹೋದ್ಯೋಗಿಗಳಾದ ಶ್ರೀ ಸುಂದರ್ ಕುಂಜತ್ತಾಲ್, ಮತ್ತು ವಿ. ಟಿ. ಅಧ್ಯಾಪಕರು ಎಲ್ಲಾ ರೀತಿಯ ಸಹಕಾರ

ಕೊಡುವುದನ್ನು ಸ್ಮರಿಸುವುದು ನನ್ನ ಕರ್ತವ್ಯ. ತಂದೆ-ತಾಯಿಗಳಲ್ಲಿ ಮಕ್ಕಳ ವಿದ್ಯಾಭ್ಯಾಸದ ಮಹತ್ವದ ಅರಿವು ಮೂಡಿಸಲು ಗಣ್ಯರೊಂದಿಗೆ ಅವರ ಭೇಟಿ ಏರ್ಪಡಿಸಿದ್ದೇನೆ.

**ನಿಮ್ಮ ಶ್ರಮಕ್ಕೆ ಸಿಕ್ಕ ಪುರಸ್ಕಾರಗಳು ಯಾವುವು?**

ನನಗೆ ಎರಡು ಬಾರಿ ಪ್ರಶಸ್ತಿ ಸಿಕ್ಕಿದೆ. 1991-92ರಲ್ಲಿ ಮೇಯರ್ ಪ್ರಶಸ್ತಿ ಸಿಕ್ಕಿದಾಗ ನಾನು ಘಾಟ್‌ಕೋಪರ್‌ನ ಸಾಯಿನಾಥ್ ಮುನಿಸಿಪಲ್ ಕನ್ನಡ ಸ್ಕೂಲಿನಲ್ಲಿ ಕೆಲಸ ಮಾಡ್ತಿದ್ದೆ. ದಕ್ಷಿಣ ಭಾರತದ ಶಾಲೆಗಳಿಂದ ಮೂರು ಜನಕ್ಕೆ ಸಿಗುವ ಪ್ರಶಸ್ತಿಯಿದು. ಹಿಂದೆಯೂ ಕನ್ನಡದ ಅಧ್ಯಾಪಕ ಅಧ್ಯಾಪಕಿಯರಿಗೆ ಈ ಪ್ರಶಸ್ತಿ ಸಿಕ್ಕಿದೆ. 1994-95ರಲ್ಲಿ ದಕ್ಷಿಣ ಭಾರತದವರಲ್ಲೇ ಮೊಟ್ಟಮೊದಲಿಗೆ ಅತ್ಯುತ್ತಮ/ಶ್ರೇಷ್ಠ ಶಾಲಾ ಅಧ್ಯಾಪಕಿಯ ರಾಜ್ಯ ಪ್ರಸಸ್ತಿ ನನಗೆ ಸಿಕ್ಕಿತು. ಒಂದು ಪ್ರಮಾಣ ಪತ್ರ, 5,000 ರೂ. ನಗದು ಮತ್ತು ಗಾಯಿತ್ರಿಯ ಪದಕ ಪ್ರಶಸ್ತಿ ಪಡೆದದ್ದರಿಂದ ಸಿಕ್ಕಿತು.

**ನಿಮ್ಮ ಮುಂದಿನ ಯೋಜನೆಗಳು?**

ಮಕ್ಕಳ ಉದ್ಧಾರವೇ ದೇಶದ ಉದ್ಧಾರ. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಅವಕಾಶದಿಂದ ವಂಚಿತರಾದ ಮಕ್ಕಳ ಭವಿಷ್ಯ ಉತ್ತಮಗೊಳಿಸುವ ಉದ್ದೇಶ ನನ್ನದು. ಮಕ್ಕಳಿಗೆ ಎಲ್ಲಾ ರೀತಿಯ ಬೆಂಬಲ ಕೊಟ್ಟು ಪ್ರೋತ್ಸಾಹಿಸುತ್ತೇನೆ. ನಿವೃತ್ತಿ ಹೊಂದಲು ಇನ್ನೂ ಮೂರು ವರ್ಷಗಳಿವೆ. ಅಷ್ಟರವರೆಗೂ ಸಕ್ರಿಯವಾಗಿ ಕೆಲಸಕ್ಕೆ ತೊಡಗಿಕೊಳ್ಳುವ ಯೋಜನೆ ಸಾಕಲ್ಲವೇ?

ಮಾತೃಭಾಷೆ ಮಲೆಯಾಳಂ ಆದರೂ ಮನೆಮಾತು ಕನ್ನಡವೇ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಜಮುನಾ ಹಸನ್ಮುಖಿ. ಸೌಮ್ಯ ಸ್ವಭಾವದ ಈಕೆ ಇಂತಹ ಶಾಲೆಗಳಲ್ಲಿ ಶಿಸ್ತಿಗೆ ಯಾವ ಕ್ರಮ ತೆಗೆದುಕೊಳ್ಳಕ್ಕೆ ಆಗಲ್ಲ, ಒಮ್ಮೆ ಬೈದು ಭಯ ಪಡಿಸಿದರೆ ಮಕ್ಕಳು ಬರೋದೇ ಇಲ್ಲ. ಅದಕ್ಕೇ ಅತ್ಯಂತ ತಾಳ್ಮೆಯಿಂದ ವರ್ತಿಸಬೇಕಾಗತ್ತೆ ಆಂದಾಗ ಅದರಲ್ಲಿ ಸತ್ಯಾಂಶವಿದೆಯೆನಿಸಿತು.

ಅತಿಥಿ ಸತ್ಕಾರಕ್ಕೆ ಮನೆಯಾದರೇನು ಶಾಲೆ ಯಾದರೇನು ಎಂಬಂತೆ ತಮ್ಮ ಕೈಚೀಲದಲ್ಲಿ ಮನೆಯಿಂದ ತಂದಿದ್ದ ಬಿಸಿ ಕಾಫಿ ಮತ್ತು ಬಿಸ್ಕತ್ತುಗಳನ್ನು ಮುಂದೆ ಹಿಡಿದರು. ಆ ವೇಳೆಗಾಗಲೇ ಅವರ ಸಾಕಷ್ಟು ಸಮಯ ತೆಗೆದು ಕೊಂಡಿದ್ದೆ. `ನೇಸರು' ಪತ್ರಿಕೆಯ ಪರವಾಗಿ ಅವರನ್ನು ಅಭಿನಂದಿಸಿ ಅಲ್ಲಿಂದ ಬೀಳ್ಕೊಂಡು ಹೊರಟೆ. ನನ್ನೊಂದಿಗೆ ಮಹಡಿ ಇಳಿದು ಬಂದು ಕಳುಹಿಸಿಕೊಟ್ಟ ಜಮುನಾರ ಸರಳ ವ್ಯಕ್ತಿತ್ವದಿಂದ ಮನ ತುಂಬಿ ಬಂದಿತ್ತು.

●

ವಿಚಾರ ಧಾರೆ:

# ಪ್ರೀತಿ - ನದಿಯಂತೆ

ಆಧಾರ : ಜೆ. ಕೃಷ್ಣಮೂರ್ತಿ ಜೀವನ ಪುಪುಲ್ ಜಯಕರ

ಅನು : ಅರುಣ ಮೋಹನ

**ಜೆ. ಕೃಷ್ಣಮೂರ್ತಿ `ಜೆ.ಕೆ.' ಎಂದೇ ಚಿರಪರಿಚಿತರಾದ ಜಗತ್ತು ಕಂಡ ಅಪರೂಪದ ದಾರ್ಶನಿಕ. ಬುದ್ಧನ ನಂತರ ಬದುಕಿನ ಕೇಂದ್ರವಾಗಿ ಮನುಷ್ಯನನ್ನೇ ಇರಿಸಿ ನೋಡಿದವರಲ್ಲಿ ಜೆ.ಕೆ. ಒಬ್ಬರು.**

**`ನೀವೇ ಜಗತ್ತು, ನೀವು ಬದಲಾಗದೆ ಯಾವುದೂ ಬದಲಾಗದು'.**

**ಜೆ.ಕೆ.ಗೆ ಮಾರ್ಗಗಳಿಲ್ಲ. ಹಾಗಾಗಿ ಯಾವುದು ಸೂತ್ರಗಳಿಲ್ಲ. ತಮ್ಮ ಹತ್ತಿರ ಬಂದ ಎಲ್ಲರನ್ನು ಅವರವರೇ ಹೊಣೆಗಾರರಾದ ಬದುಕಿನ ಮಾರ್ಗಕ್ಕೆ ಉದ್ದೀಪಿಸಿದರು. 1996 ಅವರ ಜನ್ಮಶತಾಬ್ದಿಯ ವರ್ಷ. ಪ್ರೀತಿಯ ಬಗೆಗಿನ ಕೆಲವು ಜೆ.ಕೆ. ಚಿಂತನೆಗಳು ಇಲ್ಲಿವೆ.**

ಪ್ರೀತಿ: ಸದಾ ತುಂಬಿ ಹರಿದ ನದಿಯಂತೆ, ಹರಿವೆಡೆಯೆಲ್ಲಾ ನದಿ ಜೀವ ತುಂಬುತ್ತದೆ. ಮಲಿನವಾದರೂ, ಮಾರು ಕ್ರಮಿಸುವಷ್ಟರಲ್ಲಿ ತಿಳಿಗೊಂಡು ಸಾಗುತ್ತದೆ. ಏನೂ ಪ್ರೀತಿಯನ್ನು ಮಲಿನಗೊಳಿಸಲಾರದು. ಒಳಿತು, ಕೆಡುಕು, ಸೌಂದರ್ಯ, ಕುರೂಪ ಎಲ್ಲ ಅದರಲ್ಲಿ ಕರಗುತ್ತದೆ.

ಪ್ರೀತಿ, ತನ್ನೊಳಗೆ ತಾನೆ ಪರಿಪೂರ್ಣ, ಅನಂತ.

ಸುಖ ನಿದ್ದೆಯಿಂದ ತಟ್ಟಿ ಎಬ್ಬಿಸಿದ ಮುಂಜಾವಿನ ಮೊದಲ ಕಿರಣ, ಮಲಗುವ ಮುನ್ನ ಶಾಂತ ಆಗಸದ ಚುಕ್ಕಿಗಳನ್ನು ಗಮನಿಸಿರಬಹುದು.

ಪ್ರೀತಿ?

ಪ್ರೀತಿಯ ಅಪಾರ ಮಾರ್ದವತೆ, ಶಕ್ತಿ ಏನೊ ಅರಿಯದವರು ನಾವು. `ಪ್ರೀತಿ, ನಮಗೆ ಒಂದು ಪದ ಅಷ್ಟೆ, ಮನುಷ್ಯರನ್ನು ಕೊಂದು ಗರ್ವದಿಂದ ನಿಲ್ಲುವ ಸ್ವೇಚ್ಛಾಧಿಕಾರಿ, ಪ್ರಾಣಿಗಳ ಜೀವ ಅಳಿಸಿ ಮಾರಿ ಬೀಗುವ ಕಟುಕ, ಧಿಮಾಕಿಂದ ಮೆರೆವ ಶ್ರೀಮಂತ. ಯೌವನಕ್ಕೆ ಆಗಷ್ಟೇ ಕಣ್ಣು ತೆರೆಯುತ್ತಿರುವ ಹುಡುಗ, ಹುಡುಗಿ ಎಲ್ಲ ಬಳಸಿ ಸವೆದ ಪದ'.

ಪ್ರೀತಿಯ ಸವಿಯಲ್ಲಿ ಅಪಾರತೆ ಇದೆ. ಗಾಢತೆ ಇದೆ. ನಾವು ಇರದ ಸ್ಥಿತಿ ಇದೆ. ಇದ್ಯಾವುದೂ ಅರಿಯದ ನಮಗೆ `ಪ್ರೀತಿ' ಒಂದು ಶಬ್ದ, ಪದ.

ನಿಜ `ಪ್ರೀತಿ' ಎಂದರೆ ಅನಂತದ ಅರಿವು.

ಬದುಕು ದ್ವಂದ್ವ, ನಮ್ಮ ಸಂಬಂಧಗಳೋ ಒರಟೊರಟು, ಹುಸಿ ಹುಸಿ, ಸಂಬಂಧ ಎಂದರೆ ನಮ್ಮ ಅನುಕೂಲಕ್ಕಿರುವ ಸಲೀಸು ವ್ಯವಹಾರ. ಅಲ್ಲಿ ಪ್ರೀತಿ ಇಲ್ಲ.

ನಮ್ಮ ಒಣ ಸಂಬಂಧಗಳಲ್ಲಿ ಸೌಂದರ್ಯ, ಸೌಗಂಧ ಹೇಗೆ ತಾನೆ ಬಂದೀತು?

ಪ್ರೀತಿ ಇರುವ ಸಂಬಂಧಗಳಲ್ಲಿ ನಮ್ಮನ್ನು ನಾವೇ ಕಳೆದುಕೊಳ್ಳಬೇಕು. ಅದು ಈಗ, ಈ ಕ್ಷಣಕ್ಕೆ ಆಗಬೇಕಾದ್ದು.

ತಾಜಾ, ನಿತ್ಯ ನೂತನ ಎನಿಸದ ಬದುಕು ಏಕತಾನತೆ: ಒಂದು ಹವ್ಯಾಸ.

ಪ್ರೀತಿ: ಹವ್ಯಾಸವಾಗಲಿ ಬೇಸರವಾಗಲಿ ಅಲ್ಲ, ಆಗುವುದಿಲ್ಲ. ನಾವು ಪ್ರೀತಿಸುವುದಿಲ್ಲ. ಮೇಲುಮೇಲಷ್ಟೇ ಅಂಟಿ ಉಳಿಯುತ್ತೇವೆ. ಸಣ್ಣ ಸಣ್ಣ ಸಂಗತಿಗಳಿಂದಲೇ ನಮಗೆ ತೃಪ್ತಿ, ಸುಖ, ಅಸುಖ ಎಲ್ಲ.

ನಮ್ಮ ಸಮಸ್ಯೆ, ಅದಕ್ಕೆ ಉತ್ತರ ಕೂಡ ನಮ್ಮ ಮನಸುಗಳ ಮಟ್ಟದಲ್ಲಿ . . . ಕೀಳುತನಗಳಲ್ಲಿ ನಮ್ಮ ಬದುಕು.

ನಾವು ಪ್ರೀತಿಸುತ್ತೇವೆ.

ಪ್ರೀತಿಯ ಮುಖ್ಯ ಸತ್ವ ಭಯ, ಹತಾಶೆ, ದುಃಖ ಅಥವಾ ಆಸೆ. ಅದನ್ನೇ `ಪ್ರೀತಿ' ಅನ್ನುತ್ತೇವೆ.

ಅದು ಪ್ರೀತಿಯೆ?

ಪ್ರೀತಿ ತೀರಾ ಆತಂಕಕಾರಿ. ಅದು ಮಾತ್ರ ಸಂಪೂರ್ಣ ಸುಭಿದ ಕ್ರಾಂತಿ ತರಬಲ್ಲದು. ಕೆಲವರು ಮಾತ್ರ ಪ್ರೀತಿಸಬಲ್ಲರು. ಕೆಲವರಿಗಷ್ಟೇ ಪ್ರೀತಿ ಬೇಕು. ನಮ್ಮ ಪ್ರೀತಿಗೆ ನಮ್ಮದೇ ಚೌಕಟ್ಟುಗಳು.

ಪ್ರೀತಿ, ಮಾರಾಟದ ವಸ್ತು, ನಮ್ಮದು ವ್ಯಾಪಾರಿ ಬುದ್ಧಿ. ಆದರೆ, ಪ್ರೀತಿ ಎಂದೂ ಮಾರಾಟದ ವಸ್ತು ಅಲ್ಲ; ಕೊಡು ಕೊಳ್ಳುವ ವ್ಯವಹಾರ ಅಲ್ಲ.

ಪ್ರೀತಿ ಒಂದು ಸ್ಥಿತಿ. ಮನುಷ್ಯನ ಎಲ್ಲ ಸಮಸ್ಯೆಗಳನ್ನೂ ನೀಗಿಬಿಡುವ ಸ್ಥಿತಿ.

ಬದುಕು ಎಷ್ಟೊಂದು ಶ್ರೀಮಂತ, ಅಪೂರ್ವಗಳ ನಿಧಿ. ನಾವು ಅದರತ್ತ ಬರಿದಾದ ಹೃದಯದೊಡನೆ ಹೋಗುತ್ತೇವೆ. ಬದುಕಿನ ಅಪಾರತೆಯನ್ನು ನಮ್ಮ ಖಾಲಿ ಹೃದಯಗಳಲ್ಲಿ ತುಂಬಿಸಿಕೊಳ್ಳುವ ಪರಿ ತಿಳಿಯದು. ನಮ್ಮದು ಅಂತರಂಗದ ಬಡತನ.

(11ನೇ ಪುಟಕ್ಕೆ ಮುಂದುವರಿದಿದೆ)

# ದಾಸರೆಂದರೆ ಪುರಂದರ ದಾಸರಯ್ಯಾ....

● ರೇಖಾ

ನಮ್ಮ ಇಂದಿನ ಸಂಗೀತ ಪದ್ಧತಿಗೆ ಆದ್ಯ ಆಚಾರ್ಯ ಪುರುಷರಂತಿರುವ ಪುರಂದರದಾಸರ ಕೊಡುಗೆ ಕರ್ನಾಟಕ ಸಂಗೀತ ಹಾಗೂ ಸಾಹಿತ್ಯ ಕ್ಷೇತ್ರಗಳಿಗೆ ವಿಶಿಷ್ಟವಾದದ್ದು. ವ್ಯಾಸರಾಯರ ಶಿಷ್ಯ ಕೋಟಿಯಲ್ಲಿ ಪುರಂದರರು ಬಹು ಪ್ರಸಿದ್ಧರಾದವರು. ಪೂರ್ವಾಶ್ರಮದಲ್ಲಿ ಶ್ರೀನಿವಾಸ ನಾಯಕರಾಗಿದ್ದು ಪುರಂದರದಾಸರು ಆಧ್ಯಾತ್ಮಿಕ ಉನ್ನತಿಯ ಹಾದಿ ಹಿಡಿದಿದ್ದು ಅವರ ಹೆಂಡತಿಯ ದೆಸೆಯಿಂದ. ಹಾಗಾಗಿ 'ಹೆಂಡತಿ ಸಂತತಿ ಸಾಸಿರವಾಗಲಿ' ದಂಡಿಗೆ ಬೆತ್ತ ಹಿಡಿಸಿ ದಳಯ್ಯ ಎಂದು ಹೃತ್ಪೂರ್ವಕವಾಗಿ ಅತ್ಯಂತ ಕೃತಜ್ಞತೆಯಿಂದ ಇಡೀ ಸಂತತಿಯನ್ನೆ ಹಾಡಿ ಹರಸಿಬಿಟ್ಟಿದ್ದಾರೆ.

'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂದರಿತ ಪುರಂದರರ ಗುರುಗಳು ವ್ಯಾಸರಾಯರು. ಗುರುಗಳಿಂದ ದೀಕ್ಷೆ ಪಡೆದು 'ಪುರಂದರ ವಿಠಲ' ಎಂಬ ಅಂಕಿತ ನಾಮದಲ್ಲಿ ಇವರು ರಚಿಸಿದ ಕೃತಿಗಳು ಅಪಾರ. ಸರಳವಾದ ಭಾಷೆಯ ಪುರಂದರದಾಸರ ರಚನೆಗಳನ್ನು ಕೀರ್ತನೆ, ಸುಳಾದಿ ಮತ್ತು ಉಗಾಭೋಗ ಎಂದು ವಿಂಗಡಿಸಲ್ಪಟ್ಟಿದೆ.

'ಕೀರ್ತಿ' 'ಕೀರ್ತಿಸು' ಎಂಬ ಪದದಿಂದ 'ಕೀರ್ತನೆ' ಹುಟ್ಟಿಕೊಂಡಿದೆ. 'ಕೀರ್ತನೆ' ಪದಕ್ಕೆ 'ಸ್ತುತಿ' ಎಂದೂ 'ಸ್ತೋತ್ರ'ವೆಂದೂ ಅರ್ಥವಿದೆ. 'ಕೀರ್ತಿಸು' ಎಂದರೆ ಸ್ತುತಿಸು, ಹೊಗಳು, ವರ್ಣಿಸು ಎಂದರ್ಥವಾಗುತ್ತದೆ. ಕೀರ್ತನೆಯ ಮುಖ್ಯಗುಣ ಸ್ತುತಿಸುವದೇ ಆಗಿದೆ. ದೇವರ ನಾಮವೆಂದು ಪ್ರಚಲಿತವಿರುವ ದಾಸರ ಕೀರ್ತನೆಗಳು ತಾಳ ಬದ್ಧವಾಗಿದ್ದು ಗೇಯತೆಯಿಂದ ಕೂಡಿದೆ. ಪಲ್ಲವಿ ಅನುಪಲ್ಲವಿ ಮತ್ತು ಚರಣಗಳು ದೇವರ ನಾಮದ ಅಂಗಗಳು ಕೃತಿಗಳ ವ್ಯಾಪ್ತಿಯ ದೃಷ್ಟಿಯಿಂದ ಹರಿದಾಸ ಸಾಹಿತ್ಯದ ವಿಕಾಸದಲ್ಲಿ ಪುರಂದರ ದಾಸರಿಗೆ ವಿಶಿಷ್ಟ ಸ್ಥಾನವಿದೆ 'ಕಾಲಿಗೆ ಗೆಜ್ಜೆ ಕಟ್ಟಿ ನೀಲ ವರ್ಣನ ಗುಣ ಆಲಾಪಿಸುತ್ತ ಬಲು ಓಲಗ ಮಾಡುವಂಥ' ಮಧುಕರ ವೃತ್ತಿ ದಾಸರದು. ಬದುಕನ್ನೆ ಭಕ್ತಿಯ ಹಾದಿಯನ್ನಾಗಿ ಮಾಡಿಕೊಂಡು ಆನಂದದಿಂದ ಆಲಾಪಿಸಿದ ಪುರಂದರ ದಾಸರ ದೇವನಾಮಗಳು ಇಂದಿಗೂ ಮನಸೂರೆಗೊಳ್ಳುತ್ತದೆ.

ಪರಮ ದಯಾ ಸಾಗರಂ ವರನಾರದಾವತಾರಂ |
ಪರಮಾದ್ಭುತ ಕೃಷ್ಣ ದರ್ಶನಂ ಗಾನ ಕಿಲೋ ದ್ವಾರಕಂ ||
ವರಗುರು ವ್ಯಾಸರಾಜ ಯತಿವರ ಶಿಷ್ಯಾಗ್ರೇಸರಂ |
ಪರವಾಸುದೇವ ಕೃಷ್ಣಂದಿರ ಮುಖನಿಷ್ಟಮಾನ್ಯ ಕೀರ್ತನ ಕರ್ತಾರಂ ವಾರಂ ವಾರಂ ||

'ಶ್ರೀ ಪುರಂದರ ಗುರುವರಂ ಭಾವಯೇ ಹಂ' ಎಂಬ ದೇವರ ನಾಮದ ಮೇಲಿನ ಚರಣದಲ್ಲಿ ಪುರಂದರ ದಾಸರು ನಾರದಾಂಶ ಸಂಭೂತರೆಂದೂ ಅವರ ಕೃತಿಗಳು ಉಪನಿಷತ್ತಿಗೆ ಸಮಾನವೆಂಬಂತೆ ಸ್ಮರಿಸಲ್ಪಟ್ಟಿದೆ.

**ದೇವರನ್ನು ನೆನೆದು, ಸಂಗೀತ ಹಾಡಿ ಭಕ್ತಿಯ ವಿವಿಧ ಸ್ತರಗಳನ್ನು ಪರಿಚಯಿಸಿದ್ದು 'ದಾಸ ಸಾಹಿತ್ಯ' ಭಕ್ತಿಯ ಅಗಾಧ ವೈವಿಧ್ಯ ಭಾವುಕತೆಯ ಸಧ್ವಿಂದ ಅಭಿವ್ಯಕ್ತಿ ಪುರಂದರ ದಾಸರ ಕೃತಿಗಳಲ್ಲಿ ಕಂಡು ಬರುತ್ತದೆ. ಬದುಕಿಗೆ ಹತ್ತಿರವಾಗಿ ಬದುಕಿನಿಂದಲೇ ರೂಪುಗೊಂಡಿರುವ ಪುರಂದರಸಾರ ಕೃತಿಗಳೆಲ್ಲವು ಸಾಮಾಜಿಕ ವಿಡಂಬನೆ ಇಂದಿಗೂ ಅರ್ಥಪೂರ್ಣ**

'ದಾಸರೆಂದರೆ ಪುರಂದರ ದಾಸರಯ್ಯ' ಎಂದು ದಾಸ ವರ್ಗದಲ್ಲೆ ಶ್ರೇಷ್ಠರೆನಿಸಿದ್ದಾರೆ ಪುರಂದರದಾಸರು.

ಮುಕ್ತಿ ಬಯಸುವವನಿಗೆ ಭಕ್ತಿ ಬೇಕೆಂಬುದೇ ದಾಸರ ಮತವಾಗಿದ್ದರೂ ಕೇವಲ ಭಕ್ತಿಯನ್ನು ಮಾತ್ರ ಸಾಧಿಸುತ್ತಾ ತೃಪ್ತಿಪಡದ ಪುರಂದರ ದಾಸರು ಸಮಾಜದ ರೀತಿನೀತಿಗಳನ್ನು ವಿಡಂಬಿಸಿ ಓರೆಕೋರೆಗಳನ್ನು ಸರಿಪಡಿಸಲು ನೆರವಾಗುವಂತೆ ಕೃತಿಗಳನ್ನು ರಚಿಸಿದ್ದಾರೆ.

ತಾವು ನುಡಿದಂತೆ ನಡೆಯುತ್ತಾ ಸಮಾಜವನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುವ ವೈದ್ಯರೂ ಆಗಿದ್ದಾರೆ. ಭಕ್ತಿ ವೈರಾಗ್ಯಗಳು ಢಂಬಾಚಾರದ ಹಾದಿ ಹಿಡಿದು ಬರೀ ತೋರಿಕೆಯಾದಾಗ ಅದನ್ನು 'ಉದರ ವೈರಾಗ್ಯವಿದು ನಮ್ಮ ಪರಮ ಪುರುಷನಲಿ ಲೇಶ ಭಕುತಿಯಿಲ್ಲ'' 'ಮಡಿ ಮಡಿ ಮಡಿ ಎಂದು ಅಡಿಗಡಿಗೆ ಹಾರುವಿರಿ ಮಡಿ ಮಾಡುವ ಪರಿಬೇರಿಹುದು' ಎಂದು ವಿಂಡಿಸಿದ್ದಷ್ಟೇ ಅಲ್ಲ, ಅದಕ್ಕೆ ಪರಿಹಾರಗಳನ್ನು ಸೂಚಿಸಿದ್ದಾರೆ. ಜನಸಾಮಾನ್ಯರ ಬದುಕನ್ನು ಅನನ್ಯ ರೀತಿಯಲ್ಲಿ ನೋಡುವ ದೃಷ್ಟಿ ಇವರಲ್ಲಿ ಕಂಡು ಬರುವಷ್ಟು ವಿಸ್ತಾರವಾದ ರೀತಿಯಲ್ಲಿ ಮತ್ತಾರಲ್ಲೂ ಕಂಡು ಬಂದಿಲ್ಲ. ದಿನನಿತ್ಯದ ಘಟನೆಗಳಿಗೆ ಪರಮಾರ್ಥದ ಮೆರುಗನ್ನು ಕೊಟ್ಟು ತಮ್ಮದೇ ಆದ ಆಧ್ಯಾತ್ಮಿಕ ದೃಷ್ಟಿಯಿಂದ ನೋಡುವುದು ಅವರ ವೈಶಿಷ್ಟ್ಯ. ಹಾಗಾಗಿಯೇ ಅವರ ಕೃತಿಗಳಲ್ಲಿ ಚಿನ್ನ ಬಾಲಕೃಷ್ಣ ಚೆನ್ನಾದ ಬಾಳೆಯ ಹಣ್ಣಾಗ ಬಲ್ಲ ! (ಹಣ್ಣು ಬಂದಿದೆ ಕೊಳ್ಳಿರೀ ನೀವೀಗ, ಚಿನ್ನ ಬಾಲಕೃಷ್ಣನೆಂಬ ಚೆನ್ನಾದ ಬಾಳೆಯ)

'ಕಲ್ಲು ಸಕ್ಕರೆ ಬಂದಿದೆ ಕೊಳ್ಳಿರಿ ನೀವೆಲ್ಲರು', 'ಹೂವ ತರುವರ ಮನೆಗೆ ಹುಲ್ಲ ತರುವ', 'ಕುರುಡು ನಾಯಿಯು ಸಂತೆಗೆ ಬಂದಂತೆ', 'ಅಲ್ಲದೆ ನಮ್ಮನೆ ಇಲ್ಲಿರುವುದು ಸುಮ್ಮನೆ' ಇತ್ಯಾದಿ ದೇವರ ನಾಮಗಳಲ್ಲಿ ದಿನನಿತ್ಯದ ಬದುಕಿಗೆ ಹೊಂದಿಕೊಂಡಂತಾ ಪ್ರತಿಮೆಗಳನ್ನು ಅಧ್ಯಾತ್ಮದ ಸಾಧನೆಯ ಮೆಟ್ಟಿಲಾಗುವಂತೆ ಉಪಯೋಗಿಸಿ ದೇವರ ನಾಮಗಳನ್ನು ರಚಿಸಿದ್ದಾರೆ. ಜನರೊಡನೆ ಬೆರೆತು ಸಮಾಜದ ಕಷ್ಟ ಸುಖಗಳು ತಮ್ಮವೆಂದು ತಿಳಿದು ಅವುಗಳಿಂದ ವಿಮುಕ್ತಿ ಪಡೆಯಲು ಮಾರ್ಗದರ್ಶನ ನೀಡಿ ವೇದಾಂತ ಸಾರವನ್ನು, ಮಧ್ವಮತದ ತತ್ವಗಳನ್ನು ಸರಳ ಸುಂದರವಾಗಿ ಕನ್ನಡದ ಮಾತುಗಳಲ್ಲಿ ಸಾರಿದ್ದಾರೆ. ಹರಿನಾಮದ ಮಹಿಮೆಯನ್ನು ಹೃದಯಾಂತರದಿಂದ ಹೊಮ್ಮುವಂತೆ ಕೊಂಡಾಡುವ ದಾಸರು ಒಂದೊಂದು ಆಚರಣೆಯನ್ನು ಸುದೀರ್ಘವಾಗಿ ಅವುಗಳ ಫಲಾಫಲಗಳೊಂದಿಗೆ ವಿವರಿಸಿದ್ದಾರೆ.

'ಹರಿಕಥಾ ಶ್ರವಣ ಮಾಡೋ ಪಾಡೋ, ಹರಿಕಥಾ ಶ್ರವಣ ಮಾಡೋ' ಕೃತಿಯಲ್ಲಿ ವೈಕುಂಠಕ್ಕೆ ಪಥವಾದ ಹರಿನಾಮದ ಶ್ರವಣ; 'ಹರಿನಾರಾಯಣ ಹರಿನಾರಾಯಣ ಹರಿನಾರಾಯಣ ಎನು ಮನವೆ' ಕೃತಿಯಲ್ಲಿ ಹರಿನಾಮದ ಕೀರ್ತನೆ, 'ಕಲಿಯುಗದೊಳು ಹರಿ ನಾಮವ ನೆನೆದರೆ' ಕೃತಿಯಲ್ಲಿ ಮನನದ ಬಗ್ಗೆ ಹೇಳುತ್ತಾ ಭಗವಂತ ನೊಲುಮೆಗೆ ಪಾತ್ರರಾಗಲು ವಿವಿಧ ಸಾಧನಗಳಾದ ಶ್ರವಣ, ಕೀರ್ತನ, ಮನನದ ಬಗ್ಗೆ ಹೇಳಿದ್ದಾರೆ.

'ಏನು ಕಾರಣ ಯದುಪತಿಯನ್ನು ಮರೆತಿರಿ ಧನ ಧಾನ್ಯ ಪುತ್ರರು ಕಾಯುವರೆ?' ಎಂದು ಎಚ್ಚರಿಸುತ್ತಾ ಹರಿನಾಮದ ಮಹಿಮೆಯನ್ನು ಕೊಂಡಾಡಿದ ಪುರಂದರರಿಗೆ ಹರಿಯನ್ನು ಮೀರಿದ್ದು ಹರಿನಾಮ. 'ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೊ' ಎಂದು ನಾಮದ ಮಹಿಮೆಯಿಂದಲೇ ತೃಪ್ತಿಯನ್ನು ಹೊಂದಿ, ಹರಿನಾಮದ ಮಹಿಮೆಯನ್ನು ಹಾಡಿ ಸ್ಮರಿಸುವ ಜನಕೆ ಭವಭಯ ಪರಿತಾಪಗಳಿಲ್ಲ ಎಂಬ ಭರವಸೆಯ ನುಡಿಯನ್ನಾಡಿದ್ದಾರೆ.

ರಾಮಾವತಾರ, ಕೃಷ್ಣಾವತಾರಗಳಿಗೆ ಹೆಚ್ಚಿನ ಪ್ರಾಶಸ್ತ್ಯಕೊಟ್ಟು ಕೃತಿಗಳನ್ನು ರಚಿಸಿದ್ದರೂ ಬಾಲಕೃಷ್ಣನ ರೂಪು ಲೀಲೆಗಳ ಬಗ್ಗೆ ಪುರಂದರರಿಗೆ ಹೆಚ್ಚು ಒಲವಿದ್ದಂತಿದೆ. ಕಣ್ಮನಗಳು ಸೂರೆಗೊಳ್ಳುವಂತೆ ಹಲವಾರು ಕೃತಿಗಳಲ್ಲಿ ವಾತ್ಸಲ್ಯರಸ ಮೆರೆದಿದೆ. ಕೃಷ್ಣನ ಬಾಲಲೀಲೆಗಳನ್ನು ಎಷ್ಟು ರೀತಿಯಲ್ಲಿ ಕೊಂಡಾಡಿದರೂ ತೃಪ್ತಿಯೇ ಇಲ್ಲವೇನೋ ಎಂಬಂತೆ ಬಹಳಷ್ಟು ಕೃತಿಗಳಲ್ಲದು ಕೇಂದ್ರವಾಗಿದೆ.

ಭಕ್ತನ ಮನಸ್ಸಿನಲ್ಲಿ ಭಕ್ತಿ ಮಾರ್ಗದಲ್ಲಿ ಪರಿಪಕ್ವವಾದಂತೆ ಅವನಿಗೆ ಭಕ್ತಿ ಸಾಕ್ಷಾತ್ಕಾರವಾಗುತ್ತದೆ. ಪುರಂದರದಾಸರೂ ಅಂತಹ ಶ್ರೇಷ್ಠ ಭಕ್ತರಲ್ಲೊಬ್ಬರು. ತಮ್ಮ ತಪ್ಪುಗಳನ್ನು ಎತ್ತಿ ಹಿಡಿದು, ತಮ್ಮ ಚಂಚಲ ಮನಸ್ಸನ್ನು ನಿಂದಿಸಿಕೊಳ್ಳಲೂ ಹಿಂಜರಿಯದ ಆರ್ತತೆ, ದೈನ್ಯತೆ ಅವರ ಕೃತಿಗಳಲ್ಲಿ ಕಂಡು ಬರುತ್ತದೆ. 'ಸರ್ವಾಪರಾಧವ ಕ್ಷಮಿಸಯ್ಯ ಎನ್ನ ಗರ್ವಾಂಧಕಾರವ ಬಿಡಿಸಿ ರಕ್ಷಿಸಯ್ಯ' ಪರಾಕು ಮಾಡದೆ ಪರಾಂಬರಿಸಿ ಎನ್ನ ಅಪರಾಧಂಗಳ ಕ್ಷಮಿಸೋ' ಎಂದೆನ್ನುತ್ತಾ ದುರಿತಗಳನ್ನು

ತರಿದು ಕರುಣದಿಂದ `ದಾಸನ ಮಾಡಿಕೋ ಎನ್ನ' ಎಂದು ಮೊರೆಯಿಟ್ಟಿದ್ದಾರೆ. `ಹರಿಚಿತ್ತ ಸತ್ಯ ನರಚಿತ್ತಕ್ಕೆ ಬಂದದ್ದು ಲವಲೇಶ ನಡೆಯದು' ಎಂದು ಅನನ್ಯ ಭಾವದಿಂದ ಪರಮಾತ್ಮನಲ್ಲಿ ನಂಬಿಕೆಯಿಂದ ಹಾಡಿದ್ದಾರೆ. ಸದಾ ಒಂದಲ್ಲ ಒಂದಕ್ಕೆ ತ್ರಾಹಿ ತ್ರಾಹಿ ಎಂದು ತಮ್ಮ ಮುಗಿಯದ ಬೇಡಿಕೆಯ ಹಿನ್ನೆಲೆಯಾಗಿ `ಬಿನ್ನಹಕೆ ಬಾಯಿಲ್ಲವಯ್ಯ ಅನಂತ ಅಪರಾಧ ಎನ್ನಲ್ಲಿ ಇರಲಾಗಿಯ್ಯ ಎಂದು ಪಾರಮಾರ್ಥಿಕವಾಗಿ ಉಪಯೋಗದಿಂದ ನಮ್ಮ ಜೀವನದಾಸೆಯ ಬಗ್ಗೆ ಹೇಳಿದ್ದಾರೆ.

`ಏನು ಮಾಡಿದರೇನು ಭವ ಹಿಂಗದು, ದಾನವಾಂತಕ ನಿನ್ನ ದಯೆವಾಗ ದನಕ" ಎನ್ನುತ್ತಾ ತಾವು ಮಾಡಿದ ಅಪರಾಧಗಳೆಲ್ಲಾ ಪರಮಾತ್ಮನೇ ಆಡಿಸಿದ ಆಟದ ಫಲವೋ ಎಂಬಂತೆ `ಅಪರಾಧಿ ನಾನಲ್ಲ ಅಪರಾಧವೆನಗಿಲ್ಲ, ಕಪಟ ನಾಟಕ ಸೂತ್ರಧಾರಿ ನೀನೇ' ಎನ್ನುತ್ತಾ ಫಲಾಫಲಗಳನ್ನು ಭಗವಂತನಿಗೆ ಬಿಟ್ಟು ಬಿಡುವಂತೆ `ತೇಲಿಸೊ ಇಲ್ಲ ಮುಳುಗಿ ಸೋ' ಎಂದು ನಿರಾಳವಾಗುವ ಪರಿ ಪುರಂದರದಾಸರದು.

ಪರಿಪರಿಯ ಬೇಡಿಕೆಗೆ ಒಲಿಯದಿದ್ದಾಗ ದುಃಖಿತಪ್ತ ಹೃದಯದಿಂದಲೇ `ಏಕೆ ನಿರ್ದಯನಾದೆಯೋ ಹರಿಯೆ?' ಎಂದು ಮರುಗಿದ್ದಾರೆ. `ಕಂಡು ಕಂಡು ನೀಯೆನ್ನ ಕೈ ಬಿಡುವರೇ ರಂಗಾ' ಎಂದು ಪರಿತಪಿಸಿ, ಏನು ಮಾಡಿದರೇನು ಪ್ರಾಣ ನಿನದು ಸ್ವಾಮಿ ಎನ್ನುತ್ತಾ' ಇನ್ನು ದಯಬಾರದೆ ದಾಸನ ಮೇಲೆ? ಎಂದು ಪ್ರಶ್ನಿಸಿದ್ದಲ್ಲದೆ, ಭರವಸೆ ಕಳೆದುಕೊಂಡು `ಕರುಣಾಕರ ನೀ ನೆಂಬುವದ್ಯಾತಕೋ ಭರವಸೆ ಯಿಲ್ಲೆನಗೆ' ಎಂದು ಹತಾಶರಾಗಿದ್ದಾರೆ. ಅದರಿಂದಲೂ ಹರಿಯ ಒಲುಮೆ ದೊರಕಿಲ್ಲ ಎಂದೆನಿಸಿ `ಎನಗೂ ಆಣೆ ರಂಗ ನಿನಗೂ ಆಣೆ' ಎಂದು ಆಣೆಯಿಟ್ಟು ಪುರಂದರ ವಿಠಲ ಒಲಿಯದಿದ್ದರೆ ನಿನಗೆ ಆಣೆ ಎನ್ನುವ ಮಟ್ಟಕ್ಕೂ ತಲುಪುವ ದಾಸರ ಭಕ್ತಿಯ ವಿವಿಧ ಮಜಲುಗಳು ಪ್ರತೀಕದಂತಿರುವ ಕೃತಿಗಳು ಇಂದಿಗೂ ಸಂಗೀತ ಸಾಮ್ರಾಜ್ಯದಲ್ಲಿ ಪ್ರಚಲಿತವಿದೆ.

ಪ್ರಾಪಂಚಿಕ ಸಂಬಂಧಗಳನ್ನು ಭಗವಂತನೊಡನೆ ಕಲ್ಪಿಸಿಕೊಂಡ ದಾಸರ ಪದಗಳಲ್ಲಿ ಭಕ್ತಿಯು ಪಂಚ ವಿಧವಾದ ಭಾವನೆಗಳಲ್ಲಿ ಮೂಡಿ ಬಂದಿದೆ. ಅದೇ ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ ಹಾಗೂ ಶಾಂತ ಭಾವಗಳು. ಹರಿದಾಸರು ತಮ್ಮ ಭಕ್ತಿ ಮಾರ್ಗದ ಮಾಧ್ಯಮಗಳಾಗಿ ಭಾಗವತ, ರಾಮಾಯಣ, ಮಹಾಭಾರತದ ಕೃತಿಗಳನ್ನು ಬಳಸಿಕೊಂಡಿದ್ದಾರೆ. ಇದಕ್ಕಿಂತಲೂ ಮಿಗಿಲಾಗಿ ಅವರು ಹರಿಯ ಅವತಾರಗಳನ್ನು ಒಪ್ಪಿಕೊಂಡ ವಿಷ್ಣು ಪಂಥೀಯರು ಅದರಲ್ಲೂ ಹನುಮಂತನಿಗೆ ಗುರುಪದವಿಯನ್ನು ಕೊಟ್ಟಿರುವ ದ್ವೈತಿಗಳು.

ನಮ್ಮಲ್ಲಿ ತೀರ್ಥಯಾತ್ರೆ ಮಹಾ ಪುಣ್ಯದ ಕೆಲಸ. ಹರಿದಾಸರಂತೂ ಮಧ್ವ ಮತ ತತ್ವಗಳ ಪ್ರಚಾರಕ್ಕೆ ಕಕಂಣಬದ್ಧರಾದವರು. ಪುರಂದರದಾಸರು ಸಮಾಜದ ಅನೀತಿ, ಅನ್ಯಾಯಗಳ ಖಂಡನೆ ಮಾಡುತ್ತಾ ಆಚಾರ ವಿಚಾರಗಳನ್ನು ತಿಳಿಸಿಕೊಡುತ್ತಾ ನಿಂತಲ್ಲಿ ನಿಲ್ಲದೆ ಹರಿಸಂಕೀರ್ತನೆ ಮಾಡುತ್ತಾ ತೀರ್ಥ ಕ್ಷೇತ್ರಗಳಿಗೆ ಸಂಚರಿಸಿರಬೇಕು. ಹಾಗಾಗಿ ಧಾರ್ಮಿಕ ಕ್ಷೇತ್ರಗಳ ಹೆಸರುಗಳೂ ಅವರ ಕೃತಿಯಲ್ಲಿ ಕಂಡು ಬರುತ್ತವೆ. `ತಿರುಪತಿ ವೆಂಕಟರಮಣ, ನಿನಗೇತಕೆ ಬಾರದು ಕರುಣ'; `ಕಂಗಳಿದ್ಯಾತಕೋ ಕಾವೇರಿ ರಂಗನ ನೋಡದ'ಮೊದಲಾದ ರಚನೆಗಳಲ್ಲಿ ತೀರ್ಥ ಕ್ಷೇತ್ರಗಳ ಪ್ರಸ್ತಾಪ ಬಂದಿದೆ.

`ಹರಿಯ ಸೇವೆ ಮಾಡದವನ, ಹರಿಯ ಗುಣಗಳಿಡ ಸದವನ ಹರಿಯ ಕೊಂಡಾಡದ ಹರಿಯ ತಿಳಿಯದವನ ಜನ್ಮ ವ್ಯರ್ಥವಲ್ಲವೇ?'; `ನರಜನ್ಮ ಬಂದಾಗ ನಾಲಿಗೆಯಿರುವಾಗ ಕೃಷ್ಣಾ ಎನಬಾರದೆ?' ಎಂದು ಕೇಳುವ ಪುರಂದರದಾಸರು ಹರಿಯನ್ನ ಸಾಕ್ಷಾತ್ಕರಿಸಿಕೊಳ್ಳುವ ಅವಕಾಶದಂತಿರುವ ಈ `ಮಾನವ ಜನ್ಮ ದೊಡ್ಡದು ಅದ ಹಾನಿ ಮಾಡಬ್ಯಾಡಿ ಹುಚ್ಚಪ್ಪಗಳಿರಾ' ಎಂದು ಮಾನವ ಜನ್ಮದ ಹಿರಿಮೆಯ ಬಗ್ಗೆ ಹಾಡಿದ್ದಾರೆ.

`ನಿಂದಕರಿರಬೇಕು ಹಂದಿಯಿದ್ದಾರೆ ಕೇರಿ ಹ್ಯಾಂಗೆ ಶುದ್ಧಿಯೋ ಹಾಗೆ', `ಪಾಪಿ ಬಲ್ಲನೆ ಪರರ ಸುಖ ದುಃಖವಾ, ಕೋಪಿ ಬಲ್ಲನೆ ಶಾಂತ ಸುಗುಣ ದಾ ಘನವಾ'; `ಅಜ್ಞಾನಿಗಳ ಕೂಡ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡ ಜಗಳ ಲೇಸು' ಇತ್ಯಾದಿ ಕೃತಿಗಳಲ್ಲಿ ನಿಂತ ನೆಲ ಮರೆಯದಂತೆ ಮನುಷ್ಯನಿಗೆ ಸುತ್ತಲ ಸಮಾಜದಲ್ಲಿ ಎದುರಾಗುವ ಒಡನಾಡಿಗಳ ಸ್ವಭಾವ ವೈಪರಿತ್ಯಗಳ ಪ್ರಸ್ತಾಪಮಾಡಿ ಸಮಾಧಾನದ ಮಾತುಗಳನ್ನಾಡಿದ್ದಾರೆ. `ಮನವ ಶೋಧಿಸಬೇಕೂ ನಿಚ್ಚ ದಿನ ದಿನ ಮಾಡುವ ಪಾಪ ಪುಣ್ಯದ ವೆಚ್ಚ' ಎಂದು ಪರಿಶುದ್ಧವಾದ ಮನಸ್ಸು, ನಿರ್ಮಲ ಹೃದಯದಿಂದ ಮುಕ್ತಿ ಹೊಂದಲು ಮನವನ್ನು ದಿನನಿತ್ಯ ಶೋಧಿಸಿ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕೆಂಬ ಅವರ ಕರೆ ಅರ್ಥ ಪೂರ್ಣವೆನಿಸುತ್ತದೆ.

ಪುರಂದರ ದಾಸರು ಐದು ಶತಮಾನದ ಹಿಂದೆ ಹಾಡಿದ ಹಾಡುಗಳು ಇಂದಿಗೂ ಅವರ ಸತ್ವದಲ್ಲಿ ಹಳತೆನಿಸುವುದಿಲ್ಲ. `ಸತ್ಯವಂತರಿಗಿದು ಕಾಲವಲ್ಲ ದುಷ್ಟ ಜನರಿಗಿದು ಸುಭಿಕ್ಷಕಾಲ' ಮತ್ತಿತರ ರಚನೆಗಳು ಇಂದಿನ ಬದುಕಿಗೂ ಹೊಂದಿಕೆಯಾಗಿ ಕಾಲದ ಪರೀಕ್ಷೆಯನ್ನು ಮೀರಿ ಸಾರ್ವಕಾಲಿಕವಾಗಿ ಉಳಿದಿದೆ. ಸಮಾಜ ವಿಮರ್ಶೆಯನ್ನು ಕುರಿತ ಅಪಾರ ಕೃತಿಗಳಲ್ಲಿ ಅನೀತಿ, ಅನಾಚಾರ, ಸುಳ್ಳು, ಕಪಟ ಬೂಟಾಟಿಕೆ, ಡಾಂಬಿಕತೆಯನ್ನು ದಾಸರು ಕಟುವಾಗಿ ಟೀಕಿಸಿದ್ದಾರೆ.

`ಉಗಾಭೋಗ'ಗಳು ಸಣ್ಣ ಕೃತಿಗಳು. ನಾಲ್ಕರಿಂದ -ಹನ್ನೆರಡು ಸಾಲುಗಳಿದ್ದು, ದ್ವಿತೀಯಾಕ್ಷರ ಪ್ರಾಸ ಮೊದಲಾದ ಸ್ಥೂಲವಾದ ಕವಿತಾ ಲಕ್ಷಣಗಳಿದ್ದರೂ ಇಲ್ಲಿ ಸಾಹಿತ್ಯಕ್ಕೆ ಪ್ರಾಮುಖ್ಯತೆ.

ಪುರಂದರದಾಸರಿಂದ ಉಗಾಭೋಗ ಪರಂಪರೆ ಆರಂಭವಾಗಿ ಒಟ್ಟು ಆರವತ್ತು ಸಾವಿರ ಉಗಾಭೋಗ ರಚಿಸಿದ್ದಾರೆಂದು ಪ್ರತೀತಿಯಿದೆ. ಆದರೆ ಉಪಲಬ್ಧವಾಗಿರುವ ಸಂಖ್ಯೆ ತೀರ ಸಣ್ಣದು.

ಸಾಹಿತ್ಯವನ್ನು ಜನಪ್ರಿಯಗೊಳಿಸಿದಂತೆ ಪುರಂದರದಾಸರು ಸಂಗೀತವನ್ನು ಜನಸಾಮಾನ್ಯರ ಹೃದಯಕ್ಕೆ ಮುಟ್ಟಿಸಿದರು. ಸುಲಭವಾದ ಸಂಗೀತ ಶಿಕ್ಷಣ ಕ್ರಮ ರೂಪಿಸಿದ ಕೀರ್ತಿಯೂ ಪುರಂದರದಾಸರಿಗೆ ಸಲ್ಲುತ್ತದೆ. ಮಾಯಾಮಾಳವ ಗೌಳ ರಾಗವನ್ನು ಆಧಾರವಾಗಿಸಿಕೊಂಡು ಸರಳೆ, ಜಂಟಿ ವರಸೆ, ಅಲಂಕಾರ, ಪದ ಇತ್ಯಾದಿ ಬಾಲ ಪಾಠಗಳನ್ನು ಪುರಂದರದಾಸರು ರೂಪಿಸಿದ್ದಾರೆ. ಸಾಮಾನ್ಯ ಜೀವಿಗೂ ಸಾಧನಾ ಪಥ ತೆರೆದಿದೆ ಎಂಬ ತತ್ವವನ್ನು ಹೃದಯಂಗಮವಾಗಿ ನಿರೂಪಿಸುವ ಇವರ ಕೃತಿಗಳು ಸಾಹಿತ್ಯ, ಸಂಗೀತ ಮತ್ತು ಪಾರಮಾರ್ಥಿಕಗಳ ತ್ರಿವೇಣಿ ಸಂಗಮವಾಗಿದೆ. ಉಪನಿಷತ್ತಿನ ಸಾರವನ್ನೆಲ್ಲಾ ಒಳಗೊಂಡ ಇವರ ಕೃತಿಗಳು ಭಾವಪೂರ್ಣತೆಯ ಅಧ್ಯಾತ್ಮಿಕ ಅನುಭವದ ಅಭಿವ್ಯಕ್ತಿಯಾಗಿ ರುವುದರಿಂದಲೇ ವ್ಯಾಸತೀರ್ಥರಿಂದ `ಪುರಂದರೋಪನಿಷತ್' ಎಂಬ ಪ್ರಶಂಸೆಯನ್ನು ಗಳಿಸಿದೆ. ತಂಬೂರಿ ಮೀಟುತ್ತಾ ಭವಾಬ್ಧಿ ದಾಟಿದ ಪುರಂದರದಾಸರ ಭಾವುಕತೆಯಿಂದ ಕೂಡಿದ ಪದಗಳನ್ನು ಕೇಳಿದಾಗ ಇಂದಿಗೂ ದಾಸರೆಂದರೆ ಪುರಂದರದಾಸರು ಎಂದೆನಿಸದಿರದು.

---

ವಿಚಾರ ಧಾರೆ:

(8ನೇ ಪುಟದಿಂದ)

ಸಿರಿವಂತಿಕೆ ನಮ್ಮತ್ತ ಚಾಚಿದಾಗಲೂ ನಿರಾಕರಿಸಿ ಬಿಡುತ್ತೇವೆ.

ಅಪಾರ ಜಲರಾಶಿಯತ್ತ ಪುಟ್ಟ ಪಾತ್ರೆ ಹಿಡಿದು ಹೋಗುವವರು ನಾವು. ಹೀಗಾಗಿಯೇ ಬದುಕು ನಮಗೆ ಒಂದು ಸಣ್ಣತನದ, ಮಿತಿಗೊಂಡ ವ್ಯವಹಾರ ಮಾತ್ರ.

ಈ ಭುವಿ ಎಷ್ಟು ಚಂದವಿರಬಹುದಿತ್ತು, ಇಲ್ಲಿ ಎಷ್ಟೊಂದು ಸೌಂದರ್ಯ ಇದೆ. ವೈಭವ ಇದೆ. ಇಲ್ಲಿ ಅದೆಷ್ಟು ಕೊನೆ ಇರದ ಮೋಹಕತೆ ಇದೆ.

ನಾವೋ! ನಮ್ಮದೆ ನೋವುಗಳಲ್ಲಿ ಸಿಕ್ಕಿಕೊಂಡವರು. ಇನ್ಯಾರೋ ಹೊರಬರುವ ದಾರಿ ತೋರಿದಾಗಲೂ ಅತ್ತ ಉದಾಸೀನ ಮತ್ತು ಅದೇ ನೋವು ತೊಳಲಿಕೆಗಳಲ್ಲಿ ಉಳಿದು ಬಿಡುತ್ತೇವೆ.

ಎಲ್ಲರಲ್ಲೂ ಪ್ರೀತಿಯ ತುಡಿತವಿದೆ. ಅರದ ಪ್ರೀತಿಯ ಕುಡಿ ಇದೆ. ಎಲ್ಲರಲ್ಲೂ ಪ್ರೀತಿಯ ಮಹಾಪೂರವೇ ಇದೆ.

# ವಶೀಕರಣ ಮತ್ತು ರೋಗ ಚಿಕಿತ್ಸೆ

● ಡಾ| ಉಷಾ ಸುಬ್ಬರಾವ್

ಮುಂಬಯಿಯ ಗೋಖಲೆ ಎಜ್ಯುಕೇಷನ್ ಸೊಸೈಟೀಸ್ ಕಾಲೇಜ್ ಆಫ್ ಎಜ್ಯುಕೇಷನ್ ಅಂಡ್ ರಿಸರ್ಚ್‌ನ ಪ್ರಾಂಶುಪಾಲೆಯಾದ ಡಾ| ಉಷಾ ಸುಬ್ಬರಾವ್ ಅವರು ಮನಶ್ಶಾಸ್ತ್ರದಲ್ಲಿ ಪದವೀಧರೆಯಾಗಿದ್ದು ``ಬೇಸಿಕ್ ಅಂಡ್ ಅಡ್ವಾನ್ಸ್ ಕೋರ್ಸ್ ಇನ್ ಹಿಪ್ನೋಸಿಸ್ ಅಂಡ್ ಹಿಪ್ನೋ ಥೆರಪಿ'ಯಲ್ಲಿ ವಿಶೇಷ ಅಧ್ಯಯನ ಮಾಡಿದ್ದಾರೆ. ಹಲವಾರು ಸ್ಥಳಗಳಲ್ಲಿ ಹಿಪ್ನೋ ಥೆರಪಿಯ ಪ್ರಾತ್ಯಕ್ಷಿಕೆಗಳನ್ನು ನಡೆಸಿದ ಇವರು ಇಂಡಿಯನ್ ಸೊಸೈಟಿ ಆಫ್ ಕ್ಲಿನಿಕಲ್ ಹಿಪ್ನೋಸಿಸ್ ಅಂಡ್ ರಿಸರ್ಚ್‌ನ ಸಕ್ರಿಯ ಸದಸ್ಯರೂ ಆಗಿದ್ದಾರೆ. ಶಿಕ್ಷಣ ಇಲಾಖೆಯಲ್ಲಿ ರಚನಾತ್ಮಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಇವರ ``ಶೈಕ್ಷಣಿಕ ತಂತ್ರಜ್ಞಾನ'' ಎಂಬ ಗ್ರಂಥವನ್ನು ಮಹಾರಾಷ್ಟ್ರ ಸರಕಾರ ಪ್ರಕಟಿಸಿದೆ. ಇಂಡಿಯನ್ ಜರ್ನಲ್ ಆಫ್ ಕ್ಲಿನಿಕಲ್ ಹಿಪ್ನೋಸಿಸ್ ಅಂಡ್ ರಿಸರ್ಚ್‌ನಂತಹ ಖ್ಯಾತ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿರುವ ಡಾ| ಉಷಾ ಸುಬ್ಬರಾವ್ ಪ್ರಸ್ತುತ ಲೇಖನದಲ್ಲಿ ವಶೀಕರಣದ ಕುರಿತು ಸ್ಥೂಲ ಪರಿಚಯ ನೀಡಿದ್ದಾರೆ.

## ವಶೀಕರಣ ಕುರಿತು ತಪ್ಪು ಕಲ್ಪನೆಗಳು

ವಶೀಕರಣ ಅಥವಾ ಹಿಪ್ನೋಟಿಸಂ ಎಂಬ ಮಾತು ಕೇಳಿದ ಕೂಡಲೇ ಜನಸಾಮಾನ್ಯರ ಮನಸ್ಸಿನಲ್ಲಿ ಅವ್ಯಕ್ತ ಭೀತಿಯೂ, ಇದೂ ಏನೋ ಒಂದು ಅದ್ಭುತ ನಿಗೂಢ ವಿಷಯ ಎಂಬಂತೆ ವ್ಯಕ್ತಿ ಸಹಜವಾದ ಕುತೂಹಲವೂ ಉಂಟಾಗಬಹುದು. ಹೀಗೆ ಕಪೋಲ ಕಲ್ಪಿತ ಭೀತಿಯ ಕಾರಣವಾಗಿ ಬಹುಸರಳವಾದ ತಂತ್ರವನ್ನೊಳಗೊಂಡ ಹಾಗೂ ಅತ್ಯಂತ ಉಪಯುಕ್ತವಾದ ವಶೀಕರಣ ಚಿಕಿತ್ಸೆ (Hypnotherapy)ಯಿಂದ ಸಾರ್ವಜನಿಕರು ಅದರ ಸರಿಯಾದ ಪ್ರಯೋಜನ ಪಡೆಯುವಲ್ಲಿ ಹಿಂದೇಟು ಹಾಕುತ್ತಿದ್ದಾರೆ. ಹಲವರಿಗೆ ಇದರ ಕುರಿತು ಇರುವ ಭೀತಿಯೆಂದರೆ ಈ ಚಿಕಿತ್ಸೆ ನಡೆಸುವಾತ (ಹಿಪ್ನೊಟಿಸ್ಟ್) ತಮ್ಮ ಮೇಲೆ ಅನೈತಿಕ ಕಾರ್ಯಾಚರಣೆ ಮಾಡಬಹುದು ಅಥವಾ ತಮ್ಮನ್ನು ಅನೈತಿಕ ಕಾರ್ಯಗಳಿಗೆ ಪ್ರಚೋದಿಸಬಹುದು ಎಂಬುದೇ ಆಗಿದೆ. ಆದರೆ ಇವೆಲ್ಲ ಆಧಾರರಹಿತ, ಈ ಮೊದಲೇ ಹೇಳಿದಂತೆ ಸಂಪೂರ್ಣವಾಗಿ ಕಪೋಲ ಕಲ್ಪಿತ. ಓರ್ವ ವ್ಯಕ್ತಿಯ ಸಹಜ ಸ್ವಭಾವ ಹಾಗೂ ಅಂತಃಪ್ರಜ್ಞೆಯ ವಿರುದ್ಧವಾಗಿ ಈ ರೀತಿಯ ಅಕೃತ್ಯಗಳನ್ನು ಮಾಡಲು ಪ್ರೇರೇಪಿಸುವುದು ಹಿಪ್ನೊಟಿಸ್ಟ್‌ರಿಂದ ಸಾಧ್ಯವಾಗದ ಕೆಲಸ. ಉದಾಹರಣೆಗೆ ಹೇಳಬೇಕೆಂದರೆ ವಶೀಕರಣಕ್ಕೊಳಗಾದ ವ್ಯಕ್ತಿಯೊಬ್ಬನಿಗೆ ಓರ್ವ ವ್ಯಕ್ತಿಯನ್ನು ಘಾಸಿಗೊಳಿಸಲು ಚಿಕಿತ್ಸಕರು ಹೇಳಿದರೆಂದಿಟ್ಟು ಕೊಳ್ಳೋಣ. ಆ ವ್ಯಕ್ತಿ ಸ್ವಭಾವತಃ ಆಕ್ರಮಣಶೀಲನಲ್ಲದಿದ್ದರೆ ಅಂತಹ ಘೋರಕಾರ್ಯವನ್ನೆಸಗಲಾರ.

ವಶೀಕರಣಕ್ಕೊಳಗಾದ ವ್ಯಕ್ತಿ ತನ್ನ ಸ್ಮೃತಿ (ಎಚ್ಚರ) ತಪ್ಪುತ್ತಾನೆ ಎಂಬ ವಿಚಿತ್ರ ವಿಚಾರ ಬಹುತೇಕ ಜನರಲ್ಲಿ ಮನೆ ಮಾಡಿದೆ. ಆದರೆ ಅದು ನಿಜವಲ್ಲ. ವಶ್ಯಸುಪ್ತಿ ಅಥವಾ ಸಮಾಧಿ ಸ್ಥಿತಿಯಲ್ಲಿ ವ್ಯಕ್ತಿ ಎಚ್ಚರ ತಪ್ಪಿರುವುದಿಲ್ಲ.

ಸುಪ್ತ್ಯಾವಾಹನೆ (ಹಿಪ್ನೊಟೈಜ್) ಗೊಳಗೊಂಡ ವ್ಯಕ್ತಿ ತನ್ನ ಪರಿಸರ ಕುರಿತು ಪರಿಪೂರ್ಣ ಪ್ರಜ್ಞೆ ಹೊಂದಿರುತ್ತಾನೆ. ಒಂದು ವೇಳೆ ಪ್ರತ್ಯೇಕವಾದ ಒಂದು ವಿಷಯದ ಮೇಲೆ ಮನಸ್ಸನ್ನು ಕೇಂದ್ರೀಕರಿಸಿದಾಗ ಸುತ್ತಲಿನ ಪರಿಸರ ಕುರಿತು ಅನಾಸಕ್ತಿ ಅಥವಾ ಉಪೇಕ್ಷೆ ತೋರಬಹುದು. ಹಾಗೆಯೇ ವಶೀಕರಣಕ್ಕೊಳಗಾದ ವ್ಯಕ್ತಿ ತಾನಿರುವ ಪರಿಸರವನ್ನು ಮರೆತು ನಿದ್ರೆಗೊಳಗಾಗುವುದಿಲ್ಲ. ಆದರೆ ನಿದ್ರೆ ಹೋದ ವ್ಯಕ್ತಿ ಸುತ್ತುಮುತ್ತಲಿನ ಕುರಿತು ಯಾವುದೇ ಎಚ್ಚರ ಹೊಂದಿರುವುದಿಲ್ಲ.

ಒಂದು ವೇಳೆ ವಶೀಕರಣಕ್ಕೆ ಒಳಗಾದ ವ್ಯಕ್ತಿಯನ್ನು ವಶೀಕರಣಕ್ಕೊಳಪಡಿಸಿದವರು ಆ ಸ್ಥಿತಿ (ಸಮಾಧಿ)ಯಿಂದ ಬಿಡುಗಡೆ ಮಾಡಿಸದಿದ್ದಲ್ಲಿ (ಬಿಡುಗಡೆ ಮಾಡಿಸಲು ಅಸಮರ್ಥರಾದಲ್ಲಿ) ಅಂತಹವರು ದೀರ್ಘಕಾಲದ (ಅನಿಶ್ಚಿತಕಾಲ)ವರೆಗೆ ಅದೇ ಸ್ಥಿತಿಯಲ್ಲಿ ಇರುತ್ತಾರೆ ಎಂಬ ಭ್ರಾಂತಿಯೂ ಹಲವು ಜನರಲ್ಲಿ ನೆಲೆಯೂರಿದೆ. ಹಾಗೇನಾದರೂ ವ್ಯಕ್ತಿಯನ್ನು, ಆ (ಸಮಾಧಿ) ಸ್ಥಿತಿಯಿಂದ ಬಿಡುಗಡೆಗೊಳಿಸಲು ಅಸಮರ್ಥರಾದಲ್ಲಿ, ಚಿಕಿತ್ಸಕರು ಸಲಹೆ ನೀಡುವುದನ್ನು ನಿಲ್ಲಿಸಿದ ಕೆಲವೇ ಕೆಲವು ನಿಮಿಷಗಳಲ್ಲಿ ವಶೀಕರಣಕ್ಕೊಳಗಾದ ವ್ಯಕತಿ ತಾನೇ ತಾನಾಗಿ ಆ ಸ್ಥಿತಿಯಿಂದ ಬಿಡುಗಡೆ ಹೊಂದುತ್ತಾನೆ ಅಥವಾ ಸ್ವಲ್ಪ ಸಮಯ ನಿದ್ರೆ ಹೋಗಿ ಆ ಮೇಲೆ ಎಚ್ಚೆತ್ತು ಕೊಳ್ಳುತ್ತಾನೆ.

ವಶೀಕರಣಕ್ಕೊಳಗಾದಾಗ ತಾವು ತಮ್ಮ ಗುಟ್ಟುಗಳನ್ನು ರಟ್ಟಾಗಿಸುತ್ತೇವೆ ಎಂದು ಕೆಲವು ಜನರಿಗೆ ಒಂದು ರೀತಿಯ ಅಂಜಿಕೆಯಿದೆ. ಈ ಮೇಲಿನ ಎಲ್ಲ ಹೆದರಿಕೆಗಳಿಗಿಂತಲೂ ಈ ಅಂಜಿಕೆಯೇ ಅಧಿಕವಾಗಿರುವುದರಿಂದ ಹಿಪ್ನೊಟಿಸಂನಿಂದ ಆಗಬಹುದಾದ ಪ್ರಯೋಜನ ಪಡೆಯಲು ಜನರು ಹಿಂಜರಿಯುತ್ತಿದ್ದಾರೆ. ಆದರೆ ಈ ಕಲ್ಪನೆ ಕೂಡ ಅಸಂಬದ್ಧ, ಪ್ರಾಯೋಗಿಕವಾಗಿ ಅಸಂಭವವೂ ನಿಜ. ಯಾವುದೇ ವ್ಯಕ್ತಿ ಸಮಾಧಿ ಸ್ಥಿತಿಯಲ್ಲಿದ್ದರೂ ತನ್ನನ್ನು ಇಬ್ಬಂದಿಗೆ ಸಿಲುಕಿಸುವ ಸನ್ನಿವೇಶವನ್ನು ಯಾವತ್ತೂ ಸೃಷ್ಟಿಸಲಾರ. ಇಕ್ಕಟ್ಟಿಗೆ ಸಿಲುಕಿಕೊಳ್ಳಲಾರ. ಹಿಪ್ನೊಟಿಸ್ಟ್ ಅಲೌಕಿಕ ರಹಸ್ಯ ಶಕ್ತಿಯನ್ನು ಹೊಂದಿರುವುದರಿಂದ ಏನನ್ನಾದರೂ ಮಾಡಬಲ್ಲ ಎಂಬ ಕಲ್ಪನೆಯೂ ಹಲವು ಜನರಲ್ಲಿ ಬೇರೂರಿದೆ. ಆದರೆ ಇವೆಲ್ಲ ಅಪ್ಪಟ ಸುಳ್ಳು ಹಾಗೂ ಆಧಾರರಹಿತ.

### ವಶೀಕರಣ ಎಂದರೇನು?

ನೀಡಿದ ಸಲಹೆಗಳನ್ನು ಅಂಗೀಕರಿಸಲು ಹಾಗೂ ಸಲಹೆಗಳ ಮೇಲೆ ಸಂಪೂರ್ಣವಾಗಿ ಗಮನವನ್ನು ಕೇಂದ್ರೀಕರಿಸಿ ಅವನ್ನು ಅನುಮೋದಿಸಲು ಹೆಚ್ಚಿನ ಪ್ರೇರೇಪಣೆಗೆ ಅನುವು ಮಾಡುವಂತೆ ಮಾಡುವ ವ್ಯಕ್ತಿಯ ದೈಹಿಕ ಹಾಗೂ ಮಾನಸಿಕ ವಿಶ್ರಾಂತಿಯ ಸ್ಥಿತಿಯನ್ನೇ ವಶೀಕರಣ ಅಥವಾ ವಶ್ಯಸುಪ್ತಿ ಎನ್ನುತ್ತಾರೆ.

ಈ ಕೆಳಗಿನ ಒಂದು ಉದಾಹರಣೆ ಹೆಚ್ಚು ಪ್ರೇರೇಪಣೆಗೆ ಅನುವು ಮಾಡಿಕೊಡುವುದು ಎಂದರೇನು ಎಂಬ ಬಗೆಗೆ ವಿವರಣೆ ನೀಡಬಲ್ಲದು.

೨೨ ವರ್ಷ ವಯಸ್ಸಿನ ಯುವಕನೊಬ್ಬ ಮುಷ್ಟಿ ಮೈಥುನದ ಕಾರಣವಾಗಿ ತಾನು ನಪುಂಸಕನಾದೆನೇನೋ ಎಂದು ಹೆದರಿದ್ದ. ಆ ಯುವಕ ಮೊದಲು ಓರ್ವ ಲೈಂಗಿಕ ತಜ್ಞರಿಂದಲೂ ನಂತರ ಓರ್ವ ಮನಶಾಸ್ತ್ರಜ್ಞರಿಂದಲೂ ತಲಾ ಎರಡೆರಡು ವರ್ಷ ಚಿಕಿತ್ಸೆ ಪಡೆದ. ಆದರೆ ಆತನಲ್ಲಿ ಯಾವುದೇ ರೀತಿಯ ಸುಧಾರಣೆ ಕಂಡು ಬರಲಿಲ್ಲ. ಇದರಿಂದಾಗಿ ಆ ಮನೋವೈದ್ಯರು ಆ ಯುವಕನನ್ನು ನಮ್ಮಲ್ಲಿ ಚಿಕಿತ್ಸೆ ಪಡೆಯುವಂತೆ ತಿಳಿಸಿದರು. ಆದರೆ ಮುಷ್ಟಿ ಮೈಥುನದ ಕುರಿತು ಆತನಿಗಿರುವ ತಪ್ಪು ಗ್ರಹಿಕೆಯಿಂದ ಹೊರಬರಲು ನಾವು ಆವನಿಗೆ ಹೊಸದೇನನ್ನು ಹೇಳಲಿಲ್ಲ. ಆದರೆ ಈ ಮೊದಲು ಆತನಿಗೆ ಆ ಇಬ್ಬರು ತಜ್ಞರು ಲೈಂಗಿಕ ವಿಷಯದ ಕುರಿತು ನೀಡಿದ ವೈಜ್ಞಾನಿಕ ಮಾಹಿತಿಯನ್ನು ವಶ್ಯಸುಪ್ತಿ ಸ್ಥಿತಿಯಲ್ಲಿ ಆಲೋಚಿಸುವಂತೆ ಸಲಹೆ ನೀಡಿದೆವು. ಹೀಗೆ ಆ ಯುವಕ

ಸ್ವಯಂ ಈ ರೀತಿ ತನ್ನನ್ನು ತಾನೇ ಚಿಕಿತ್ಸೆಗೊಳಪಡಿಸಿಕೊಂಡು (ವಶ್ಯಸುಪ್ತಿಯಲ್ಲಿ ಲೈಂಗಿಕ ವಿಷಯದ ಕುರಿತು ಆ ಇಬ್ಬರು ತಜ್ಞರಿಂದ ಪಡೆದ ವೈಜ್ಞಾನಿಕ ಮಾಹಿತಿಗಳ ಮೇಲೆ ತನ್ನ ಮನಸ್ಸನ್ನೆಲ್ಲ ಕೇಂದ್ರೀಕರಿಸಿ ಅದಕ್ಕೆ ತಕ್ಕಂತೆ ನಡೆಯಲು ಮಾನಸಿಕವಾಗಿ ಪಕ್ವಗೊಂಡ) ಕೇವಲ ಆರು ವಾರಗಳ ಕಾಲದಲ್ಲೇ ಆ ತಪ್ಪು ಗ್ರಹಿಕೆಯಿಂದ ಬಿಡುಗಡೆ ಹೊಂದಿದ. ಹೀಗೆ ನಾಲ್ಕು ವರ್ಷಗಳಿಂದ ಯಾವುದೇ ರಚನಾತ್ಮಕವಾದ ಪರಿಣಾಮವನ್ನುಂಟು ಮಾಡದ ವೈಜ್ಞಾನಿಕ ಮಾಹಿತಿಗಳು, ಈ ವಶೀಕರಣ (ಹಿಪ್ನಾಟಿಸಂ)ದಿಂದಾಗಿ ಕೇವಲ ಆರು ವಾರಗಳಲ್ಲಿ ಆತ ತನ್ನ ತಪ್ಪನ್ನೂ ತಿದ್ದಿಕೊಳ್ಳುವಂತೆ ಮಾಡಿ, ಮಾನಸಿಕ ದೃಢತೆಯನ್ನು ನೀಡಿದವು.

ಮನಸ್ಸಿನಲ್ಲಿ ಜಾಗೃತ ಪ್ರಜ್ಞೆ ಹಾಗೂ ಸುಪ್ತ ಪ್ರಜ್ಞೆಗಳೆಂಬ ಎರಡು ಭಾಗಗಳಿವೆ. ಜಾಗೃತ ಪ್ರಜ್ಞೆಯೆಂದರೆ ಮನೋವ್ಯಾಪಾರದ ಕುರಿತು ಮಾತನಾಡುವಾಗ ನಾವು ನಮ್ಮ ಎಚ್ಚರದಲ್ಲಿ (ಜಾಗೃತಾವಸ್ಥೆಯಲ್ಲಿ) ಮಾತನಾಡುವ ಮಾನಸಿಕ ಸ್ಥಿತಿಯೇ ಆಗಿದೆ. ಜಾಗೃತ ಪ್ರಜ್ಞೆ ಮನಸ್ಸಿನ ಹತ್ತರಲ್ಲಿ ಒಂದು ಭಾಗದಷ್ಟಿದ್ದರೆ ಸುಪ್ತ ಪ್ರಜ್ಞೆ ೯ ಪಾಲಿನಷ್ಟಿರುತ್ತದೆ. ವಶೀಕರಣಗೊಂಡ ಸ್ಥಿತಿಯಲ್ಲಿ ನೀಡಿದ ಸಲಹೆಗಳು ಸುಪ್ತ ಪ್ರಜ್ಞೆಗೆ ಸ್ಪಂದಿಸುತ್ತವೆ. ಆದರೆ ಮಾಮೂಲು ಎಚ್ಚರದ ಸ್ಥಿತಿಯಲ್ಲಿ ನೀಡಿದ ಸಲಹೆಗಳು ಜಾಗೃತಪ್ರಜ್ಞೆಗೆ ಪ್ರೇರಣೆ ನೀಡುವುವು. ಆದ ಕಾರಣ ತುಲನಾತ್ಮಕವಾಗಿ ನೋಡಿದಾಗ ವಶೀಕರಣ ಅಥವಾ ಸಂಮೋಹನ ಚಿಕಿತ್ಸೆಯು ಸುಪ್ತ ಪ್ರಜ್ಞೆ ವ್ಯಕ್ತಿಯ ಜಾಗೃತ ಮನಸ್ಸನ್ನು ಸರಿಯಾದ ದಾರಿಯಲ್ಲಿ ಪ್ರಭಾವಿತಗೊಳಿಸುವ ಸಲುವಾಗಿ ಹಿಪ್ನಾಟಿಸ್ಟ್ ಕೈಕೊಳ್ಳುವ ಕ್ರಮವಾಗಿದೆ. ಹಾಗೂ ಹಿಪ್ನೋಥೆರಪಿ ಇತರ ಯಾವ ಚಿಕಿತ್ಸಾ ವಿಧಾನಗಳಿಗಿಂತ ಕಡಿಮೆ ಕಾಲಾವಕಾಶದಲ್ಲಿ ಸಮಸ್ಯೆಗಳಿಂದ ವ್ಯಕ್ತಿ ಬಿಡುಗಡೆ ಹೊಂದಲು ಸಹಾಯಕವಾಗುವುದು.

## ವಶ್ಯ ಸುಪ್ತಿಯ ಪ್ರಭೇದಗಳು

ವಶ್ಯ ಸುಪ್ತಿಯಲ್ಲಿ ಲಘು, ಮಧ್ಯಮ ಹಾಗೂ ಏಕಾಗ್ರ ಅಥವ ಗಾಢ ಎಂಬ ಮೂರು ಪ್ರಭೇದಗಳಿವೆ. ಸಾಮಾನ್ಯವಾಗಿ ಪ್ರತಿಶತ ಜನಸಂಖ್ಯೆಯಲ್ಲಿ ೨೫% ಏಕಾಗ್ರತೆ ಅಥವಾ ಗಾಢ ಸಮಾಧಿಗೆ, ೩೫% ಮಧ್ಯಮ ಹಾಗೂ ೩೫% ಲಘು ಸಮಾಧಿ ಹೀಗೆ ೯೫% ಜನ ವಶ್ಯ ಸುಪ್ತಿ ಯೋಗ ಸ್ಥಿತಿಯನ್ನು ಹೊಂದಬಲ್ಲರು. ಮಾನಸಿಕ ಸಮಸ್ಯೆಗಳಿಂದ ಬಿಡುಗಡೆ ಹೊಂದಲು ವ್ಯಕ್ತಿತ್ವದ ಬೆಳವಣಿಗೆಗಾಗಿ ಲಘು ಸಮಾಧಿ ಸ್ಥಿತಿಯೇ ಸಾಕು. ಹೀಗೆ ೯೫% ಜನರು ಈ ಲಘು ಸಮಾಧಿಯಿಂದ ಪ್ರಯೋಜನ ಪಡೆಯಬಹುದು.

## ವಶೀಕರಣದಲ್ಲಿ ಎಷ್ಟು ವಿಧ?

ವಶೀಕರಣದಲ್ಲಿ ಅನ್ಯ ವಶೀಕರಣ (Hetero hypnosis) ಮತ್ತು ಸ್ವಯಂ ವಶೀಕರಣ (Auto hypnosis) ಎಂಬ ಎರಡು ವಿಧಗಳಿವೆ. ಓರ್ವ ವ್ಯಕ್ತಿಯನ್ನು ಹಿಪ್ನಾಟಿಸ್ಟ್ ಒಬ್ಬರು ವಶೀಕರಣಕ್ಕೊಳಪಡಿಸುವುದನ್ನು ``ಅನ್ಯ ವಶೀಕರಣ" (Hetero hypnosis) ಎನ್ನುತ್ತಾರೆ. ವ್ಯಕ್ತಿ ಬೇರೆ ಯಾರ ಪ್ರಭಾವವೂ ಇಲ್ಲದೆ ಸ್ವಯಂ ತಾನೇ ವಶೀಕರಣಕ್ಕೊಳಗಾಗುವುದು ``ಸ್ವಯಂ ವಶೀಕರಣ" (Auto hypnosis) ಎಂದು ಕರೆಯುತ್ತಾರೆ. ಸ್ವಯಂ ವಶೀಕರಣ ಎಷ್ಟು ಸುಲಭವೆಂದರೆ ಯಾರೇ ಆಗಲಿ ಮನಸ್ಸು ಮಾಡಿದರೆ ಅರ್ಧ ಗಂಟೆಯ ಒಳಗಾಗಿ ಅದನ್ನು ಕಲಿಯಬಹುದು. ಈ ಸ್ವಯಂ ವಶೀಕರಣವನ್ನು ಪ್ರತಿ ದಿನ ಮಾಡಿದರೆ ಕನಿಷ್ಠ ಮೂರು ನಾಲ್ಕು ವಾರಗಳಲ್ಲೇ ಅದರಲ್ಲಿ ಪ್ರಾವೀಣ್ಯ ಪಡೆಯಬಹುದು. ಸ್ವಯಂ ವಶೀಕರಣ ಪ್ರಯೋಗದ ಪ್ರಯೋಜನವೇನೆಂದರೆ ಅದು ಅನ್ಯ ವಶೀಕರಣದಲ್ಲಿ ರೋಗಿ ವ್ಯಯಿಸಬೇಕಾದ ಹಣ ಹಾಗೂ ಸಮಯವನ್ನು ಉಳಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಸ್ವಯಂ ವಶೀಕರಣದಲ್ಲಿ ಪರಿಣತರಾದರೆ, ಅವರು ಚಿಕಿತ್ಸಕರನ್ನು ಅವಲಂಬಿಸುವ ಅಗತ್ಯವಿಲ್ಲ.

## ಮಾನಸಿಕ ಸಮಸ್ಯೆಗಳಿಂದ ಏಕೆ ಬಳಲುತ್ತಾರೆ?

ಆಧುನಿಕ ಜೀವನದ ಒತ್ತಡಗಳು ಹಾಗೂ ಧಾವಂತಗಳೇ ವ್ಯಕ್ತಿಗೆ ಮಾನಸಿಕವಾಗಿ ಸಮಸ್ಯೆಗಳ ಮೂಲಕಾರಣವಾಗಿದೆ ಎಂಬ ಒಂದು ಅಭಿಪ್ರಾಯ ವ್ಯಾಪಕವಾಗಿ ಹೇಳಲಾಗುತ್ತಿದೆ. ನಿಜವಾಗಿ ಹೇಳಬೇಕೆಂದರೆ ಒತ್ತಡ, ಜಂಜಡ, ಧಾವಂತಗಳು, ಅವಿಶ್ರಾಂತಿ ಇವುಗಳೆಲ್ಲ ಪ್ರಮುಖ ಕಾರಣಗಳೆಂದು ಹೇಳಲಾಗದು. ಇವೆಲ್ಲ ಆಯಾ ವ್ಯಕ್ತಿಯ ಗ್ರಹಿಕೆಯ ಮೇಲೆ ಅವಲಂಬಿಸಿಕೊಂಡಿವೆ. ಉದಾಹರಣೆಗೆ ಹೇಳಬೇಕೆಂದರೆ, ಸಂಕೋಚ ಪ್ರವೃತ್ತಿಯ, ಹೆಚ್ಚು ಜನರೊಂದಿಗೆ ಬೆರೆಯದ ವ್ಯಕ್ತಿ ಒಂದು ಸಮಾರಂಭದಲ್ಲಿ ಪಾಲುಗೊಳ್ಳುವುದು ಒಂದು ಉಸಿರುಗಟ್ಟಿಸುವ ಪರಿಸ್ಥಿತಿಯಾದರೆ, ಸಹವಾಸ ಪ್ರಿಯ ವ್ಯಕ್ತಿಗೆ ಇದೊಂದು ಆನಂದದಿಂದ ಹೊತ್ತು ಕಳೆಯುವ ಅವಕಾಶವಾಗಿ ಪರಿಣಮಿಸಬಹುದು. ಹೀಗೆ ವ್ಯಕ್ತಿತ್ವದಲ್ಲಿನ ಗುಣಧರ್ಮಗಳು ಒಂದು ಸನ್ನಿವೇಶವನ್ನು ಸಂತೋಷದ ಅಥವಾ ಮುಜುಗರದ, ಒತ್ತಡದ ಕ್ಷಣವಾಗಿ ಪರಿವರ್ತಿಸಬಲ್ಲವು. ಹೀಗೆ ನಿರಾಸಕ್ತಿಯನ್ನು ಮೈಗೂಡಿ ಕೊಂಡವರಿಗೆ ದಿನ ನಿತ್ಯದ ಸಾಮಾನ್ಯ ವಿಷಯದಲ್ಲೂ ಒತ್ತಡ ಹಾಗೂ ಜಂಜಾಟಗಳು ಕಾಡುತ್ತವೆ. ಈ ಕೆಳಗಿನ ಕೋಷ್ಟಕದಿಂದ ಬೇರೆ ಬೇರೆ ವ್ಯಕ್ತಿತ್ವದವರು, ಬೇರೆ ಬೇರೆ ಸನ್ನಿವೇಶಗಳನ್ನು ಯಾವ ರೀತಿಯಲ್ಲಿ ಎದುರಿಸುತ್ತಾರೆ ಎಂಬುದನ್ನು ತಿಳಿಯಬಹುದಾಗಿದೆ.

ಈ ಕೋಷ್ಟಕದಿಂದ ಗೊತ್ತಾಗುವ ವಿಷಯವೆಂದರೆ ಸರಾಸರಿ ವ್ಯಕ್ತಿತ್ವದ ವ್ಯಕ್ತಿಯೊಬ್ಬ ತನಗೆ ಅಹಿತಕರವಾದ ಘಟನೆಗಳು ಸಂಭವಿಸಿದಾಗ ಆ ಸಂದರ್ಭದಲ್ಲಿ ಮಾನಸಿಕ ಯಾತನೆಗೊಳಗಾದರೂ ಕೂಡ, ಕಾಲ ಕಳೆದಂತೆಲ್ಲ ಆತ ಅದನ್ನು ಮರೆತು ಚಿಂತೆಯನ್ನು ದೂರಮಾಡಿ ಹೊಸ ಬಾಳು ಬಾಳಬಲ್ಲ. ಕಾಲ ಆತನ ಅತ್ಯುತ್ತಮ ಚಿಕಿತ್ಸಕ. ಆದರೆ ಅತ್ಯಂತ ನ್ಯೂನ ಅಥವಾ ಅಸಮಗ್ರ ಪ್ರಕೃತಿಯ ವ್ಯಕ್ತಿಗಳಿಗೆ ಮಾನಸಿಕ ಅಸ್ವಾಸ್ಥ್ಯ ತಲೆದೋರಲು ಯಾವುದೇ ವಿಶೇಷ ಘಟನೆಗಳೂ ಬೇಕಿಲ್ಲ. ಅವರಿಗೆ ದಿನನಿತ್ಯದ ಸರ್ವೇ-ಸಾಧಾರಣ ವಿಷಯಗಳೂ ಕೂಡ ಮಾನಸಿಕವಾಗಿ ಹಿಂಸೆ ನೀಡಬಲ್ಲವು. ಇದರಿಂದಾಗಿ ಆತ ಪ್ರತಿನಿತ್ಯವೂ, ಪ್ರತಿ ಕ್ಷಣವೂ ಮಾನಸಿಕ ಅಸ್ವಸ್ಥನೇ ಆಗಿರುತ್ತಾನೆ. ಇದರಿಂದಾಗಿ ಕಾಲ ಕಳೆದಂತೆಲ್ಲ ಅವುಗಳಿಂದ ಬಿಡುಗಡೆ ಹೊಂದಿ ಚೇತರಿಸಿಕೊಳ್ಳುವ ಬದಲು ವರ್ಷಗಟ್ಟಲೆ ಮಾನಸಿಕ ಯಾತನೆಯನ್ನು ಹೆಚ್ಚು ಹೆಚ್ಚಾಗಿ ಅನುಭವಿಸುತ್ತಿರುತ್ತಾನೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ದೈಹಿಕ ದೌರ್ಬಲ್ಯ ಹೇಗೆ ದೈಹಿಕ ವ್ಯಾಧಿಗಳಿಗೆ ಕಾರಣವಾಗುತ್ತದೆಯೋ, ಹಾಗೆ ಮಾನಸಿಕ ದೌರ್ಬಲ್ಯದಿಂದ ಮಾನಸಿಕ ಅಥವಾ ಮನೋಶಾರೀರಕ ಸಮಸ್ಯೆಗಳಿಗೆ ಕಾರಣರಾಗುತ್ತಾರೆ. ಮಾನಸಿಕ ದೌರ್ಬಲ್ಯದ ಮೂಲ ಕಾರಣವೆಂದರೆ ವ್ಯಕ್ತಿತ್ವದಲ್ಲಿರುವ ನಿರುತ್ಸಾಹದ ಗುಣಗಳೇ ಆಗಿವೆ.

## ಮನೋರೋಗ ನಿದಾನಕ್ಕೆ ಕೆಲ ಸಲಹೆಗಳು

ಕೆಲ ಮಾನಸಿಕ ಮತ್ತು ಮನೋಶಾರೀರಕ ತೊಂದರೆಗಳನ್ನು ವಶೀಕರಣ ಚಿಕಿತ್ಸೆಯ ಮೂಲಕ ಈ ಕೆಳಗಿನಂತೆ ಗುಣಪಡಿಸಬಹುದು.

### ಮನೋವ್ಯಾಧಿ:

ಚಿಂತೆ, ಕೀಳರಿಮೆ, ನಿರುತ್ಸಾಹ, ಉನ್ಮಾದರೋಗ, (ಹಿಸ್ಟೀರಿಯಾ), ನಿದ್ರಾಹೀನತೆ, ಉಗುರು ಕಚ್ಚುವುದು, ಹಸಿ ವೆನೆಕ (ಹಾಸಿಗೆಯಲ್ಲಿ ಮೂತ್ರ ವಿಸರ್ಜನೆ), ಆತ್ಮವಿಶ್ವಾಸದ ಕೊರತೆ, ಸಂದರ್ಶನದ ಹೆದರಿಕೆ, ಏಕಾಗ್ರತೆಯಿಲ್ಲದಿರುವುದು, ಸ್ಮರಣ ಶಕ್ತಿಯ ಕೊರತೆ, ಕವಲೊಡೆದ ಮನಸ್ಥಿತಿ, ಭ್ರಮಾಧೀನತೆ, ಭಯ ಮೊದಲಾದವು.

### ಒತ್ತಡದಿಂದ ವ್ಯಾಧಿಗಳು:

ಉದ್ವೇಗ, ತಲೆಶೂಲೆ, ಅರೆ ತಲೆಶೂಲೆ, ಬೆನ್ನು ನೋವು, ಜೀರಕ ಹುಣ್ಣು, ರಕ್ತದ ಒತ್ತಡ [ಕಟ್ಟೊತ್ತಡ

(ಟೈಪರ್ ಟೆನ್‌ಷನ್)], ಅಸ್ತಮಾ, ನರ ಇಸಬು (Nervous eczema) ಇತ್ಯಾದಿ.

**ಲೈಂಗಿಕ ಸಮಸ್ಯೆಗಳು:**

ಸ್ತ್ರೀಯರಲ್ಲಿ: ಉದಾಸೀನತೆ, ಕಷ್ಟಮುಟ್ಟು, ಗರ್ಭಕೋಶದಲ್ಲಿ ರಕ್ತಸ್ರಾವ, ಮುಟ್ಟು ತಡೆ ಇತ್ಯಾದಿ.

**ದುರ್ವ್ಯಸನಗಳು:**

ಧೂಮಪಾನ, ಮದ್ಯಪಾನ, ಭಂಗಿ, ಚರಸ್, ಎಲ್.ಎಸ್.ಡಿ. ಇತ್ಯಾದಿ.

**ಹಿಪ್ನೋಥೆರಪಿ:**

ಹಿಪ್ನೋಥೆರಪಿ ಎಂದರೆ ವಶ್ಯ ಸುಪ್ತಿ ಸಮಾಧಿ ಸ್ಥಿತಿಯಲ್ಲಿ ಮನುಷ್ಯನ ಮಾನಸಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡು ಹಿಡಿಯುವುದು. ಅಂದರೆ ಚಿಕಿತ್ಸೆ ಗೈಯುವುದೇ ಆಗಿದೆ. ಹಿಪ್ನೋಥೆರಪಿ (ಮನೋರೋಗ ಚಿಕಿತ್ಸೆ)ಯಲ್ಲಿ ಎರಡು ಸ್ಥಿತಿಗಳಿವೆ. ಮೊದಲನೆಯದು ವ್ಯಕ್ತಿಯನ್ನು ಸಮಾಧಿ ಸ್ಥಿತಿಗೆ ಪ್ರೇರೇಪಿಸುವುದು. ಎರಡನೆಯದು ಚಿಕಿತ್ಸಾ ಸಲಹೆಗಳನ್ನು ನೀಡುವುದು.

ಹಿಪ್ನೋಥೆರಪಿಯಲ್ಲಿ ಚಿಕಿತ್ಸಕ, ರೋಗಿಯನ್ನು ವಶೀಕರಣ (ವಶ್ಯ ಸುಪ್ತಿ)ಕ್ಕೊಳಪಡಿಸಿ, ರೋಗಿ ಸಮಾಧಿ ಸ್ಥಿತಿಯಿಂದ ಹೊರಬರುವುದರೊಳಗೆ ತನ್ನ ಸಮಸ್ಯೆಗಳಿಂದ ಮುಕ್ತನಾಗುವಂತೆ ಏನೋ ಪವಾಡವನ್ನು ನಡೆಸುತ್ತಾರೆ ಎಂಬುದಾಗಿ ಬಹುತೇಕ ಜನರಲ್ಲಿ ಒಂದು ನಂಬಿಕೆಯಿದೆ. ಓರ್ವ ಶಸ್ತ್ರ ವೈದ್ಯರು ರೋಗಿಯನ್ನು ಅರಿವಳಿಕೆಗೊಳಪಡಿಸಿ, ಅಂತ್ರಪುಚ್ಛ (ಅಪೆಂಡಿಕ್ಸ್) ಹಾಗೂ ದುರ್ಮಾಂಸ (ಟ್ಯೂಮರ್)ಗಳನ್ನು ರೋಗಿ ಎಚ್ಚರಗೊಳ್ಳುವುದರೊಳಗಾಗಿ ಶಸ್ತ್ರ ಚಿಕಿತ್ಸೆಯ ಮೂಲಕ ತೆಗೆದು ಬಿಡುತ್ತಾರೆ. ಆದರೆ ಹಿಪ್ನಾಟಿಸ್ಟ್ ಮನೋರೋಗಿ ವಶ್ಯ ಸುಪ್ತಿಯಿಂದ ಸಹಜ ಸ್ಥಿತಿಗೆ ಬರುವುದರೊಳಗೆ ರೋಗಿಯ ವ್ಯಕ್ತಿತ್ವದಲ್ಲಿ ಆಳವಾಗಿ ಬೇರೂರಿದ ಚಿಂತೆ, ನಿರುತ್ಸಾಹ, ದೋಷಗಳನ್ನು ಅಷ್ಟೇ ಸುಲಭವಾಗಿ ನೀಗಿಸಲಾರ. ಹಿಪ್ನೋಥೆರಪಿಯನ್ನು ಶಾರೀರಕ ವ್ಯಾಯಾಮಕ್ಕೆ ಹೋಲಿಸಬಹುದು. ಯಾರಾದರೂ ತಮ್ಮ ದೇಹವನ್ನು ಸದೃಢವಾಗಿ ಬೆಳೆಸಬೇಕೆಂದು ವ್ಯಾಯಾಮ ಶಾಲೆಗೆ ಹೋದರೆ ಅಲ್ಲಿನ ಶಾರೀರಕ ಶಿಕ್ಷಕರು ಆ ವ್ಯಕ್ತಿಗೆ ಶಾರೀರಕ ಚಟುವಟಿಕೆಗಳನ್ನು (ವ್ಯಾಯಾಮ, ಕವಾಯತು) ಹೇಗೆ ಮಾಡಬೇಕು ಎಂದು ಹೇಳಿಕೊಡುತ್ತಾರೆ. ಹೀಗೆ ಕ್ರಮಬದ್ಧವಾಗಿ ವ್ಯಾಯಾಮ ಮಾಡುತ್ತ ಹೋದಂತೆಲ್ಲ, ಆ ವ್ಯಕ್ತಿಯ ಸ್ನಾಯುಗಳು ಹಂತ ಹಂತವಾಗಿ ಬಲಗೊಳ್ಳಲಾರಂಭಿಸುತ್ತವೆ. ಮೊದಲ ಕೆಲ ದಿನಗಳಲ್ಲಿ ಆತ ತನ್ನಲ್ಲಿ ಯಾವುದೇ ಬದಲಾವಣೆಯನ್ನು ಕಾಣಲು ಸಾಧ್ಯವಾಗದಿರಬಹುದು. ಆದರೆ ಕೆಲ ತಿಂಗಳುಗಳ ನಂತರ ನಿಶ್ಚಯವಾಗಿ ಆ ವ್ಯಕ್ತಿ ತನ್ನಲ್ಲಾಗುವ ಬದಲಾವಣೆಗಳನ್ನು ಗುರುತಿಸಬಲ್ಲ, ಹಾಗೆಯೇ ಮನೋದೌರ್ಬಲ್ಯಕ್ಕೊಳಗಾದ ಅಥವಾ ಮಾನಸಿಕ ಸಮಸ್ಯೆಗಳಿಂದ ಬಳಲಿದ ವ್ಯಕ್ತಿಯೋರ್ವ ಹಿಪ್ನೋಥೆರಪಿಸ್ಟ್ ಬಳಿಗೆ ಹೋದಾಗ ವೈದ್ಯರು ಆತನಿಗೆ ಸ್ವಯಂ ವಶೀಕರಣ (ಆಟೋ ಹಿಪ್ನೋಥೆರಪಿ)ಕ್ಕೊಳಗಾಗಲು ತರಬೇತಿ ನೀಡುವರು. ಅಂದರೆ ಸ್ವಯಂ ವಶೀಕರಣಕ್ಕೊಳಗಾಗುವ ಬಗೆ ಹೇಗೆ, ಹಾಗೂ ಸೂಕ್ತ ಸಲಹೆಗಳನ್ನು ನೀಡುವ ವಿಧಾನ ಹೇಗೆ ಎಂಬುದನ್ನು ಚಿಕಿತ್ಸಕರು ವಿವರಿಸುವರು. ಹೀಗೆ ವ್ಯಕ್ತಿಯ ಸ್ವಯಂ ವಶೀಕರಣವನ್ನು ಕ್ರಮವಾಗಿ ಅಭ್ಯಸಿಸಿದರೆ ಅರ್ಥಾತ್ ಈ ಮಾನಸಿಕ ವ್ಯಾಯಾಮವನ್ನು ಕ್ರಮವಾಗಿ ಆಚರಿಸಿದುದೇ ಆದಲ್ಲಿ ಕೆಲ ವಾರಗಳ ನಂತರ ತನ್ನಲ್ಲಿ ಸ್ವಲ್ಪ ಸುಧಾರಣೆಯನ್ನು ಕಾಣಬಹುದು. ಹಾಗೂ ಕೆಲ ತಿಂಗಳ ನಂತರ ಆತ ತಾನು ಸಮಸ್ಯೆಗಳಿಂದ ಮುಕ್ತನಾದ ಭರವಸೆ ಹೊಂದಬಲ್ಲ. ಹಾಗೂ ಆತನ ವ್ಯಕ್ತಿತ್ವ ಆರೋಗ್ಯಕರವಾಗಿಯೂ ರೂಪುಗೊಳ್ಳುತ್ತದೆ.

ವಶ್ಯ ಸುಪ್ತಿಯಲ್ಲಿದ್ದಾಗ ಇಂತಹುದು ಆಗಬೇಕು, ಇಂತಹುದು ಆಗಬಾರದು ಎಂದು ಸ್ವಯಂ ಸಲಹೆ ನೀಡಿಕೊಳ್ಳಬೇಕು. ಇದರಿಂದ ಎಲ್ಲವೂ ಪರಿಹಾರವಾಗುತ್ತದೆ ಎಂಬುದಾಗಿ ವಶೀಕರಣದ ಕುರಿತು ಕೆಲ ಜನರಿಗೆ ತೀರಾ ತಪ್ಪಾದ ಒಂದು ಅಭಿಪ್ರಾಯವಿದೆ. ಇದು ತಪ್ಪಾದ, ಅಷ್ಟೇ ಅಪ್ರಯೋಜಕ ಅಭಿಪ್ರಾಯ ಕೂಡ. ಉದಾಹರಣೆ ಹೇಳಬೇಕೆಂದರೆ: ``ನಾನು ಸನ್ನಿವೇಶವನ್ನು ಧೈರ್ಯವಾಗಿ ಎದುರಿಸಬಲ್ಲೆ", ``ನಾನು ಅಸ್ತಮಾದಿಂದ ಬಳಲಲಾರೆ", ಅಥವಾ ``ನಾನು ಹೆದರಲಾರೆ" ಇವೆಲ್ಲ ಅಪ್ರಯೋಜಕ. ಕಾರಣ ಇವು ಹೇಗೆ ಸಮಸ್ಯೆಗಳನ್ನು ಸನ್ನಿವೇಶಗಳನ್ನು ಎದುರಿಸಬೇಕು ಎಂಬುದನ್ನು ವ್ಯಕ್ತಿಗೆ ತಿಳಿಸಲಾರವು. ಕೇವಲ ಸಲಹೆಯಿಂದ ಅಸ್ತಮಾ ನೀಗಲಾರದು ಅಥವಾ ಒಂದು ಹೇಳಿಕೆಯಿಂದ ವ್ಯಕ್ತಿ ನಿರ್ಭೀತನಾಗಲು ಕಲಿಯಲಾರ. ಇಂತಹ ತಪ್ಪು ಸಲಹೆಗಳನ್ನು ಮನಶ್ಶಾಸ್ತ್ರ ಹಾಗೂ ಮನೋರೋಗ ಶಾಸ್ತ್ರ ತಿಳಿವಳಿಕೆಯಿಂದ, ಕೇವಲ ವೇದಿಕೆಯಲ್ಲಿ ಪ್ರದರ್ಶನ ನೀಡುವ ಹಿಪ್ನಾಟಿಸ್ಟ್ ಮಾತ್ರ ನೀಡಬಲ್ಲರು. ಇದು ರೋಗಿಗೆ ಪ್ರಯೋಜನವಾಗುವ ಬದಲು ಹಿಪ್ನೋಥೆರಪಿ ನಿಷ್ಪ್ರಯೋಜಕ ಎಂಬ ತೀರ್ಮಾನಕ್ಕೆ ಆತ ಬರಬಹುದು. ಈ ಕಲ್ಪನೆಯಿಂದಾಗಿ ತನ್ನ ರೋಗದಿಂದ ಮುಕ್ತನಾಗಲು ತಪ್ಪು ಹಿಪ್ನೋಥೆರಪಿಸ್ಟ್ ಬಳಿ ಹೋಗಿ ವೈಯಕ್ತಿಕವಾಗಿ ಆತ ಹಾನಿಯನ್ನು ಅನುಭವಿಸಬಹುದು. ಇದರಿಂದಾಗಿ ಅವೈದ್ಯಕ (ನಾನ್ ಮೆಡಿಕಲ್) ಹಿಪ್ನೋಥೆರಪಿಸ್ಟ್‌ಗಳು ಇಂತಹ ವಿಷಯಗಳಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಲು ವಿದೇಶಗಳಲ್ಲಿ ಕಾನೂನಿನ ನಿರ್ಬಂಧವಿದೆ. ಆದರೆ ಭಾರತದಲ್ಲಿ ಇನ್ನೂ ಅಂತಹ ಕಾನೂನು ಬರಬೇಕಾಗಿದೆ.

ವಶೀಕರಣ ಚಿಕಿತ್ಸೆಯಲ್ಲಿ ಹಲವಾರು ತಂತ್ರಗಳಿವೆ. ಈ ತಾಂತ್ರಿಕತೆಗಳನ್ನು ಉಪಯೋಗಿಸಿದರೆ ಮಾನಸಿಕ ಸಮಸ್ಯೆಗಳಿಂದ ಮುಕ್ತರಾಗಬಹುದು. ಹಾಗೂ ವ್ಯಕ್ತಿಯಲ್ಲಿರುವ ಕ್ರೀಡೆ, ವೃತ್ತಿ ಮೊದಲಾದ ಕೌಶಲ್ಯಗಳನ್ನೂ ಅಭಿವೃದ್ಧಿ ಪಡಿಸಿಕೊಳ್ಳಬಹುದು. ಸಚ್ಚಾರಿತ್ರ್ಯವನ್ನು ರೂಪಿಸಿಕೊಳ್ಳಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಹಿಪ್ನೋಥೆರಪಿಯಿಂದ ಇತರೇ ಯಾವ ಅಡ್ಡ ಪರಿಣಾಮಗಳಾಗಲೀ, ತೊಡಕುಗಳಾಗಲಿ ಇಲ್ಲ.

| ವ್ಯಕ್ತಿತ್ವ | ವ್ಯಕ್ತಿತ್ವದಲ್ಲಿರುವ ನಿರಾಸಕ್ತಿಯ ಗುಣಗಳು | ಒತ್ತಡದ (ಕಷ್ಟ) ಸಹಿಷ್ಣುತೆ | ಒತ್ತಡ ತರುವಂತಹ ಸನ್ನಿವೇಶಗಳು |
|---|---|---|---|
| ಆದರ್ಶ (ಸಾಧು) | ಇಲ್ಲ | ಗರಿಷ್ಠ ಮಟ್ಟದಲ್ಲಿ | ಇಲ್ಲ. |
| ಸರಾಸರಿ | ಕೆಲವೊಂದು | ಉತ್ತಮ | ಪರೀಕ್ಷೆಯಲ್ಲಿ ಅನುತ್ತೀರ್ಣರಾಗುವುದು, ಭಗ್ನ ಪ್ರೇಮಿಗಳಾಗುವುದು, ವ್ಯಾಪಾರ-ಉದ್ಯಮದಲ್ಲಿ ಹಾನಿಗೊಳಗಾಗುವುದು, ನಿಕಟ ವರ್ತಿಗಳ ಮರಣ. |
| ನ್ಯೂನ/ದೋಷಪೂರ್ಣ/ ಅಸಮಗ್ರ | ಹಲವು | ದುರ್ಬಲ | ಅನುದಿನದ ಸಾಮಾನ್ಯ ಘಟನೆಗಳು. ಉದಾ: ಕೆಲಸದವನು(ಳು) ಸರಿಯಾಗಿ ಕೆಲಸಕ್ಕೆ ಬರದಿರುವುದು, ಬಹಳ ಹೊತ್ತು ಬಸ್ ಬರದಿರುವುದು, ಕೆಲಸದ ಕಚೇರಿಯಲ್ಲಿ ಯಜಮಾನರ ಕಾಟ, ಹೆಂಡತಿಯೊಂದಿಗೆ ಜಗಳ, ಮಕ್ಕಳು ಅಭ್ಯಾಸ ಮಾಡುತ್ತಿಲ್ಲ, ಹಾಗೂ ವ್ಯಾಧಿಗಳು ಮತ್ತು ಇತರ ವಿಷಯಗಳು. |

ಪುಸ್ತಕ ಪರಿಚಯ:

# ಜೆ. ಪಿ. ಕುಸುಮಾ ಅವರ 'ಪರುಷ'

● ಶ್ರೀನಿವಾಸ ಜೋಕಟ್ಟೆ

ದಲಿತ ಬಂಡಾಯ ಸಂದರ್ಭದ ಅಬ್ಬರದ ಕಾವ್ಯ ಸೃಷ್ಟಿಯ ಒಂದು ಹಂತ ಮುಗಿದು, ಈಗ ಪ್ರಯೋಗಶೀಲ ಕಾವ್ಯ ಸೃಷ್ಟಿಯ ಎರಡನೆಯ ಹಂತದ ಈ ದಿನಗಳಲ್ಲಿ ಕರ್ನಾಟಕ ಮಾತ್ರವಲ್ಲ ಮುಂಬಯಿಯಲ್ಲೂ ಕನ್ನಡ ಕವಿಗಳ ಸಂಖ್ಯೆ ಹೆಚ್ಚುತ್ತಿದೆ. ಅದರಲ್ಲೂ ಕಳೆದ ಒಂದು ವರ್ಷದಲ್ಲಿ ಮುಂಬಯಿಯಲ್ಲಿ ಕವಯತ್ರಿಯರೂ ಗಮನಾರ್ಹ ಸಂಖ್ಯೆಯಲ್ಲಿ ಕಾವ್ಯ ರಚನೆ ಮಾಡುತ್ತಿದ್ದಾರೆ. ಅಂತಹ ಕವಯತ್ರಿಯರಲ್ಲಿ ಜೆ. ಪಿ. ಕುಸುಮಾ ಅವರೂ ಒಬ್ಬರು.

ಜಾಗೃತ ಮನಸ್ಸಿನ ಅನಿಸಿಕೆಗಳನ್ನು ಯಥಾವತ್ತಾಗಿ ದಾಖಲಿಸುವ ಸಂದರ್ಭದಲ್ಲೂ ಅವರು ಆಶಾವಾದಿಯಾಗಿರುತ್ತಾರೆ. ಆದ್ದರಿಂದಲೇ

`ಆಟಿಯಾಟೆಗೆ ಹೊರಟಿರುವ ಭಾವಗಳೇ
ಮರಳಿ ಬನ್ನಿ ಎನ್ನೆದೆಗೆ
ಮರಳಿ ಹೂಡಿರಿ ನವಜ್ಞಾನ ಮಳಿಗೆಯ
ಮರಳಿ ಹೊಯ್ಯಿರಿ ಹೊಸ ಹರುಷ ಧಾರೆಯ'

ಎಂದು ಆಹ್ವಾನಿಸುತ್ತಾರೆ.

ಕುಸುಮಾ ಅವರ ಕವಿತೆಗಳಲ್ಲಿ ಸಮಾಜದ ಎಚ್ಚರಿತ ಮನಸ್ಸು ಇದೆ. ಹಾಗಾಗಿ `ಎಣ್ಣೆ ಹಚ್ಚಿದ ಕೈಯಲ್ಲಿ ಹಿಡಿಯ ಬೇಡಿರೋ ಕನ್ನಡಿಯ!!' ಎನ್ನುವಲ್ಲಿಂದ (ಕನ್ನಡಿ ಕವಿತೆ)

`ಮಂಗು ಮಲಗಿದೆ ಎಬ್ಬಿಸ ಬೇಡಿ
ತವಳುತ್ತ ಅಂಬೆಗಾಲಿಕ್ಕಿ ಎದ್ದು ನಿಲ್ಲಲಿ ಅವನು

ಎನ್ನುವ ತನಕ (`ಬರಲು ಬಿಡಿ' ಕವಿತೆ) ಮುಂದುವರಿಯುತ್ತಾರೆ. ಸರಳವಾದ ಈ ಸಾಲುಗಳನ್ನು ಹೇಳುವಾಗಲೂ ಇವುಗಳ ಒಳ ಅರ್ಥದಲ್ಲಿರುವ ಹದಗೆಟ್ಟ ಪರಿಸ್ಥಿತಿಯ ಕುರಿತು ಎಚ್ಚರದಿಂದಿರುವ ಮತ್ತು ಬಾಲ್ಯದಿಂದಲೇ ವ್ಯಕ್ತಿ ಸ್ವಾವಲಂಬಿಯಾಗಲು ಸೂಚನೆ ಇವೆರಡನ್ನೂ ಕಾಣಬಹುದು.

ಮಹಿಳೆ ಸೃಷ್ಟಿಸುವ ಪಾತ್ರಗಳು ಆದರ್ಶದ ಎಲ್ಲೆಯಲ್ಲೇ ಸುತ್ತು ಹಾಕುತ್ತಿರುವಂಥವು. ಹೀಗಾಗಿ ಒಂದು ಮಿತಿಗೆ ಒಳಪಡುತ್ತಾಳೆ ಎಂಬ ಮಾತುಗಳೆಲ್ಲ ಈ ದಿನಗಳಲ್ಲಿ ಸುಳ್ಳಾಗುತ್ತಿದೆ. ಕನ್ನಡದ ಯಾವನೇ ಒಬ್ಬ ಒಳ್ಳೆಯ ಲೇಖಕನ ಬರಹದೊಂದಿಗೆ ಸ್ಪರ್ಧಿಸಬಲ್ಲ ಗುಣವನ್ನು ಇಂದು ಲೇಖಕಿ ಕೂಡಾ ಪಡೆಯುತ್ತಿದ್ದಾಳೆ.

ಅಂತಹ ಬೆಳೆಯುವ ಉದಯೋನ್ಮುಖಿ ಲೇಖಕಿಯರಲ್ಲಿ ಕುಸುಮಾ ಅವರ ಕವನಗಳೂ ಗಮನ ಸೆಳೆಯುವಂತದ್ದು.

ಹಾರಬೇಕು
ಸಣ್ಣ ಹಕ್ಕಿಯಾಗಿ
ಬೇಲಿಗಳಿರದ
ತೆರೆದಿಟ್ಟ ಆಗಸದಲ್ಲಿ (`ಬಯಕೆ' ಕವಿತೆ)

ಎಂದು ನಿಸ್ಸಂಕೋಚವಾಗಿ ಕುಸುಮಾ ಅವರು ಬರೆಯುವುದರಿಂದ ಈ ಭರವಸೆ ಸುಳ್ಳಾಗದು.

ರೆಕ್ಕೆ ಕತ್ತರಿಸಲ್ಪಟ್ಟ ಬಣ್ಣದ ಚಿಟ್ಟೆಗಳು, ಕಾನನದಲ್ಲಿ ಅರಳಿ ನೆಲ ಕಚ್ಚಿದ ಸುಮಗಳು, ಮರಳುಗಾಡಲ್ಲಿ ಬಿದ್ದ ಅನಾಥ ಕಲ್ಲುಗಳಿಗೆ ತನ್ನ ಕನಸುಗಳನ್ನು ಹೋಲಿಸುವ ಕವಯತ್ರಿ, ನಂತರ `ನೆನಪಿನ ಸುತ್ತ' ಕವನದಲ್ಲಿ

`ಅಸೂಯೆ-ಜಿಗುಪ್ಸೆಗಳ ತೊಟ್ಟಿಲಲಿ
ತೂಗಿ, ವಿಶ್ರಮಿಸಿ, ಅರಿವಿಲ್ಲದೆ ಬಿದ್ದುದನ್ನು

ಹೇಳಿದಾಗ ನೆನಪಿನಾಳಕ್ಕಿಳಿದರೆ ಮೇಲೇರಲು ಬಲು ಕಷ್ಟ' ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ.

`ತೆರೆದು ಕೊಳ್ಳುವ ಕಿರಿಕಿರಿಯ ಕಿಂಡಿಗಳಲಿ
ಪರಿಚಿತ ಭರವಸೆಯ ಕಸ ಕಡ್ಡಿಗಳು
ದಬ್ಬಲ್ಪಡುತ್ತವೆ
ತಡೆಯಿಲ್ಲವೆಂಬಂತೆ' (ಕಿರಿಕಿರಿಯ ಕಿಂಡಿಗಳು)

ಕವನದ ಆರಂಭದ ಸಾಲುಗಳಲ್ಲಿ ಕವಯತ್ರಿ ಪರಿಚಿತ ಸಮಾಜವನ್ನು ಕಾಣಿಸುತ್ತಾರಾದರೂ ನಂತರ

`ಅಪರಿಚಿತನಂತೆ ಹುಟ್ಟಿ ಕೊಳ್ಳುತ್ತಾನೆ
ದಿನ ದಿನವೂ ಹಳೆಯ ಸೂರ್ಯ
ಪರಿಚಿತನಾಗಿ ಮೆರೆದು ಮರೆಯಾಗುತ್ತಾನೆ'

ಎಂದು ಹೆಣ್ಣಿನ ತಣ್ಣಗಿನ ನೋವನ್ನೂ ವ್ಯಕ್ತ ಪಡಿಸಲು ಮರೆಯುವುದಿಲ್ಲ.

ಸಂಕಲನದಲ್ಲಿ ಇನ್ನೊಂದು ಗುರುತಿಸಿಕೊಳ್ಳುವ ಕವನ `ಕತ್ತಲು'.

ಈ ಕೋಣೆ ಹೀಗೆ . . . ಯಾವಾಗಲೂ ಕತ್ತಲೆ
ಬಲಗಾಲು, ಎಡಗಾಲು ಯಾವ ಕಾಲಿಟ್ಟರೂ
ಒಂದೇ ಹೆಜ್ಜೆಲ್ಲ ಒಳಗೆ
ಹೊರಟವಳು ಹೊರಟೇ ಹೋದಳು
ಮಾರುದ್ದ ದೇಹವನು ಹೊತ್ತು
ತರುವುದಾದರೂ ಹೇಗೆ?
ಈ ಕೋಣೆ ದುರಸ್ತಿಯಾಗದೆ
ಅಲ್ಲಿ ನನ್ನನ್ನು ನಾನು - ಬಿಡಿ
ನನ್ನ ನೆರಳನ್ನಾದರೂ ಹುಡುಕುವುದು ಹೇಗೆ
ಬೆಳಕಿಲ್ಲದೆ?

ಇಲ್ಲಿ ವೈಯಕ್ತಿಕ ಅನುಭವವೆಂದು ಗುರುತಿಸಿ ಕೊಂಡರೂ ಸಾಮಾಜಿಕ ರಚನೆಯ ಹಿನ್ನೆಲೆಯಲ್ಲಿಟ್ಟು ಅಂದರೆ `ಈ ಕೋಣೆ ದುರಸ್ತಿಯಾಗದೆ' ಎನ್ನುವ ಸಾಲುಗಳನ್ನು ಗಮನಿಸುವಾಗ ಕವಯತ್ರಿ ಅನುಭವವನ್ನು ನೋಡುವಲ್ಲಿನ ಸ್ಪಷ್ಟವಾದ ನಿಲುವೂ ಗಮನಾರ್ಹ.

ಇದೇ ಸಮಯ ಪ್ರಥಮ ಸಂಕಲನವೊಂದರಲ್ಲಿರುವ ಮಿತಿಗಳನ್ನು, ನ್ಯೂನತೆಗಳನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಕಾವ್ಯಾಂಶವನ್ನು ಅಥವಾ ಭಾವಾಂಶಗಳ ಅನ್ವೇಷಣೆಗಳೂ ಕವಯತ್ರಿ ಇನ್ನಷ್ಟು ಹೆಚ್ಚು ಗಮನ ಹರಿಸಬೇಕಾಗಿದೆ. ಇಲ್ಲವಾದರೆ ಹೇಳಿಕೆಗಳಾಗುವ, ವರದಿಗಳಾಗುವ ಕವಿತೆಗಳಾಗಿ ಬಿಡುತ್ತವೆ. ಈ ಸಂಕಲನದಲ್ಲಿ ಇಂತಹ ಕವನಗಳೂ ಸಾಕಷ್ಟು ದೊರೆಯುತ್ತವೆ. ಖಚಿತ ಅರಿವಿನ ಅಭಾವ, ವಾಚ್ಯತೆಗಳು ಸಹ ಇಲ್ಲಿಯ ಕವನಗಳಲ್ಲಿವೆ. ಈ ಸಂದರ್ಭದಲ್ಲಿ ಅವುಗಳ ಬಗ್ಗೆ ಹೆಚ್ಚು ಹೇಳುವಂತಿಲ್ಲ. ಅವೆಲ್ಲ ವಿಮರ್ಶೆಯ ಸಂದರ್ಭದಲ್ಲಿ ಕಾಣಬೇಕಾದವುಗಳು. ಆದರೂ ಓದುವಿಕೆ ಜಾಸ್ತಿಯಾದಾಗ ಕವಯತ್ರಿ ಈ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಬಹುದು. ವಿವರಗಳ ಪುನರಾವರ್ತನೆಯನ್ನೂ ಕಡಿಮೆ ಮಾಡಬಹುದು. ಈ ಎಲ್ಲ ಮಿತಿಗಳನ್ನು ಮೀರುವ ಪ್ರಯತ್ನಕ್ಕೆ ಕವಯತ್ರಿ ಒತ್ತು ನೀಡಬೇಕಾಗಿದೆ.

ಮುನ್ನುಡಿಯಲ್ಲಿ ಸನದಿಯವರು ಗುರುತಿಸಿದಂತೆ ಇಲ್ಲಿ ಎದ್ದು ಕಾಣುವ ಗುಣಗಳೆಂದರೆ ಕವಯತ್ರಿಯ ಜೀವನ ನಿಷ್ಠೆ ಹಾಗೂ ಇಂದಿಲ್ಲ, ನಾಳೆ ಒಳ್ಳೆಯದನ್ನು ಕಾಣುವ ಆಶಾವಾದ, ಮತ್ತು ಬೆಳಕಿನ ದಾರಿ ಹಿಡಿಯ ಬೇಕೆಂಬ ಹಂಬಲ. ಇವೆಲ್ಲ ಈ ಸಂಕಲನವನ್ನು ಓದಲು ಪ್ರಚೋದಿಸುವುದು.

ಹೆಜ್ಜೆ ಹೆಜ್ಜೆಗೂ ಹುಡುಕ ಬೇಕಲ್ಲಿ
ಒಂದಿಷ್ಟು ಅಡಿ ಜಾಗ
ಹುಡುಕುವುದೇ ಹೊಸ ಪ್ರಯೋಗ

ಎನ್ನುವುದನ್ನು ಒಪ್ಪುವ ಕುಸುಮಾ ಅವರ `ಹೊಸ ಹೆಜ್ಜೆ' ಕವನದ ಸಾಲುಗಳು ಮೇಲಿನ ಮಾತುಗಳನ್ನು ನಿರಾಕರಿಸಲಾರದು ಎಂಬ ನಂಬಿಕೆ ನನಗಿದೆ.

●

Regn. No. 040015/86
Regn. No. MH/By/NE121/95

ಕವನಗಳು:

# ಇಂಗ್ಲೀಷರ ಮಾಯೆ

ಈ ದೇಶ . . . ನಮ್ಮ ದೇಶ . . .
ಜೀವಕೋಶವೆಂದು
ಬೊಬ್ಬೆಹಾಕುತ್ತಿದ್ದ ಟೀಚರೊಬ್ಬರು
ಇಂಗ್ಲೀಷರ ಬಗೆಗಿನ ಕವನವೊಂದನ್ನು
ಮೆತ್ತಗೆ ಓದಿದರು.
ಅವರಲ್ಲಿಂದ ಜಾಲ್ಕಿತ್ತರೂ ಅವರ
ಮಾಯೆಯಿಲ್ಲಿದೆ
ಇಲ್ಲಿಯ ತಂದೆ-ತಾಯಿ, ಚಿಕ್ಕಮ್ಮ-ಚಿಕ್ಕಪ್ಪ
ಮಾಯವಾಗಿದ್ದಾರೆ.
ಮಮ್ಮಿ-ಡ್ಯಾಡಿ, ಅಂಟಿ-ಅಂಕಲ್
ಸೇರಿಹೋಗಿದ್ದಾರೆ
ಅಡಿಗೆ ಮನೆ `ಕಿಚನ್' ಆಗಿ ರಸ್ತೆ `ರೋಡ್'
ಆಗಿದೆ
ಭಾರತದಲ್ಲಿಯ `ಮಿತ್ರ'ನಿಗೆ ಫ್ರೆಂಡ್ ಎಂಬ
ಪಟ್ಟ ಸಿಕ್ಕಿದೆ
ಮದುವೆಯ ಬಳಿಕದ ಸಂಬಂಧಗಳೊ
ಎಷ್ಟೇಳಲಿ?
ಇನ್ ಲಾ ಗಳಲ್ಲೇ ಲೋಕ ಕಂಡಿದೆ.
ಪ್ರಿಯೆಯ ಕಿವಿಗೆ `ಡಾರ್ಲಿಂಗ್' ಪದವೇ
ಪ್ರಿಯವಾಗಿದೆ.
`ಅಮ್ಮ ನಮಸ್ಕಾರ' ಎನ್ನುವುದೇ ನರಕ
`ಹಲೋ-ಮಮ್ಮಿ' ಎನ್ನುವುದೇ ಸ್ವರ್ಗ.
ತಂದೆ ಬದುಕಿರುವಾಗಲೇ `ಡೆಡ್'
ಆಗಿರುತ್ತಾರೆ.
ಇಂಗ್ಲೀಷರ ಮಾಯೆ ಛಾಯೆಯಾಗಿದೆ.
ನಿಜಕ್ಕೂ ಭಾರತ ಭಾರತವಲ್ಲದೆ
`ಇಂಡಿಯಾ' ಆಗಿದೆ.

— ಜೆ. ಪಿ. ಕುಸುಮ

# ಸೈರಂಧ್ರಿ ಅಂದು ಇಂದು

ಮುಡಿಯ ಕಟ್ಟಲು ಬಲ್ಲೆ
ತಿಲಕ ತಿದ್ದಲು ಬಲ್ಲೆ
ತಾವರೆಯ ಕಣ್ಣಳಿಗೆ
ಕಾಡಿಗೆಯ ತಿದ್ದಲು ಬಲ್ಲೆ.
ಮರುಗ ಮಲ್ಲಿಗೆ ಜಾಜಿ
ಸುರುಗಿ ಕೇತಕಿಯ ಬಿಕ್ಕಿ
ನಾಗವೇಣಿಯರ ಸಿಂಗರಿಸ ಬಲ್ಲೆ
ಮುಂಗುರಳ ತಿದ್ದಲು ಬಲ್ಲೆ.
ಅಲತಿಕೆಯ ಹಚ್ಚಲು ಬಲ್ಲೆ
ಚಂದನ ಕಸ್ತೂರಿ ಸುಗಂಧ
ಗಳ ಪೂಸಲು ಬಲ್ಲೆ
ಸುಳಿಗಲ್ಲದಲಿ ಕರಿಚುಕ್ಕಿ ಇಡ ಬಲ್ಲೆ.
ಕಂಚಿ ನೀರಾಜಿ ಸೀರೆಗಳ
ನೆರಿ ಹಿಡಿದು ಉಡಿಸಲು ಬಲ್ಲೆ
ಬಡ ನಡುವ ಒಡ್ಯಾಣದಿ
ಸಿಂಗರಿಸ ಬಲ್ಲೆ.
ಎಂದ್ಹೇಳುತ ಬಂದಳಾ ಸೈರಂಧ್ರಿ
ನಿಂದಳಾ ಮತ್ಸ್ಯೇಶ ನರಸಿ
ಸುಧೇಷ್ಣೆಯರ ಮನೆಯ ಅಂಗಳದಿ
ದಂತ ದ್ವೈಣಿಗೆಯ ಹಿಡಿದು ಅಂದು.
ಇಂದು ಆ ಸೈರಂಧ್ರಿ
ಬ್ಯೂಟಿ ಫಾಯರ್ ಆಗಿಹಳು
ಬ್ಯೂಟಿ ಪಾರ್ಲರ್ ತೆರೆದಿಹಳು
ಕತ್ತರಿ ಚಿಮ್ಮಟಿ ಬಾಚಣಿಗೆ ಹಿಡಿದಿಹಳು.
ಬೆಳ್ಳುಳ್ಳಿ, ಈರುಳ್ಳಿ ತುರುಬುಗಳ
ಮತ್ತಷ್ಟು ಕತ್ತರಿಸುತಿಹಳು
ಬ್ಲಂಟ್ ಕಟ್ ಸ್ಟೆಪ್ ಕಟ್ ಬಾಯ್ ಕಟ್
ಎಂದು ವೃಷ್ಟಿನ ವೇಣಿಯರ ಸಿಂಗರಿಸುತಿಹಳು.
ಫ್ರೆಂಟ್ ರೋಲ್ ಪಂಪಿಂಗ್ ಎಂದು
ಕೂದಲು ರೊಂಪೆಗಳ ಮಾಡಿ
ಕಣ್ಣು ಕಾಣದಂತೆ ಕಿವಿ ಮುಚ್ಚುವಂತೆ
ಮುಖದ ತುಂಬಾ ಇಳಿಯ ಬಿಡುವಳು.
ವ್ಯಾಕ್ಸಿಂಗ್, ಫೇಶಿಯಲ್ ಬ್ಲೀಚಿಂಗ್ ಎಂದು
ಮುಖ ಮೈಗೆ ಮೆತ್ತಿ ಹುಳುಕ ಮುಚ್ಚುವಳು
ಹೆಡ್ ಮಸಾಜ್ ಮೆಹಂದಿ ಡೈಯಿಂಗ್ ಮಾಡಿ
ಬಿಳಿ ಕೂದಲುಗಳ ಕರಿಯ ಮಾಡತಿಹಳು.
ಚಿಮ್ಮಟದಿ ಹುಬ್ಬು ರೆಪ್ಪೆಗಳ ಕಿತ್ತು
ಚಿತ್ರ ಹಿಂಸೆಯ ನೀಡಿ ಕಣ್‌ಗೆ
ನೀಲಿ ಕೆಂಪುಗಳ ಬಳಿದು ಚೆಲ್ಗಣ್ಣು ಮಾಡುವಳು
ಕೆನ್ನೆಗೆ ರೋಜ್ ಹಚ್ಚಿ ಕೆಂಬಣ್ಣ ಮಾಡಿಸುವಳು.
ತುಟಿ ಉಗುರುಗಳಿಗೆ ಬಣ್ಣ ಬಳಿದು
ಕೈಗೆ ಗೋರಂಟಿಯ ಚಿತ್ತಾರ ಮಾಡಿ
ಹಣೆಗೆ ಬೇಕೋ ಬಾವೋ ಒಂದು
ಬಿಟ್ಟು ನಿಕ್ಕ ಇದೇ ಗ್ಲ್ಯಾಮರಸ್ ಎನ್ನುವಳು.
ಈ ಒಡವೆ ತಮಗೆ ಸೂಟಾಗದು
ಇದು ಹಳೆತಾಯಿತು ಎಂದು
ನಕಲಿ ಒಡವೆಗಳಲ್ಲೇ ಸಿಂಗರಿಸಿ
ವಾಸ್ತವವ ಮುಚ್ಚುವಳು.
ಕಾಲಕ್ಕೆ ತಕ್ಕಂತೆ ಬದಲಾದ ಸೈರಂಧ್ರಿ
ಉದ್ದುದ್ದ ಬಿಲ್ಲುಗಳ ಕೈಗೆ ತುರುಕಿ
ತನ್ನ V.I.P. ಬ್ಯಾಗೆತ್ತಿ
ಹೈ ಹೀಲ್ಸು ಟಕ ಟಕಿಸುತ್ತ ನಡೆದಿಹಳು.

— ರಮಾ ಕೃಷ್ಣಸ್ವಾಮಿ




ಮುಂಬಯಿ ಕನ್ನಡ ಸಂಘದ ವಜ್ರಮಹೋತ್ಸವ ಆಚರಣೆ

*We don't Laugh*
because we're happy
we're happy
because we laugh.
The moon is more useful
than the sun
Why mulla
We need light more during
the night then during
the day.
How old are you Mulla
forty
You said the same
two years ago
Yes. I always stand by
what I have said.

Edited, Printed & Published by M.A.N. Prasad on behalf of the Mysore Association, Bombay- Tel.: 402 46 47
Laser Typset and Printed at Aarati Art Printers, Fort, Bombay-400 001. * Tel.: 266 33 61/266 59 38